# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಮಾರ್ಚ್ 09, 2023

ಸಂಪುಟ : 49 ಸಂಚಿಕೆ : 296 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಇವತ್ತು ವಿಕಾಸ ಪಥಕ್ಕೆ ಐವತ್ತು



ಜನತಾವಾಣಿ ಸಂಪಾದಕ ಎಂ.ಎಸ್. ವಿಕಾಸ್‌ಗೆ ಇಂದು 50ನೇ ಜನ್ಮ ದಿನ. ಓರ್ವ ವ್ಯಕ್ತಿಯ ಜನ್ಮ ದಿನವನ್ನು ಆಚರಿಸುವಾಗ ವಸಂತ ಕಾಲದ ನೆನಪು ಬರುವುದು ಸಹಜ. ಇದೀಗ 50ನೇ ವಸಂತ ಕಾಣುತ್ತಿರುವ ವಿಕಾಸ್ ಹುಟ್ಟಿರುವುದೂ ವಸಂತ ಮಾಸದಲ್ಲೇ.

ಸುಮಾರು 29 ವರ್ಷದ ಪತ್ರಿಕೋದ್ಯಮದ ಅನುಭವದೊಂದಿಗೆ ಸಂಪಾದಕರು 50 ವಸಂತಗಳನ್ನು ಪೂರೈಸುತ್ತಿದ್ದಾರೆ. ಇದು ಜನತಾವಾಣಿ ಪತ್ರಿಕೆಯ ಪಯಣದಲ್ಲಿ ದೊಡ್ಡ ಮೈಲಿಗಲ್ಲು. ಈ ಸಂದರ್ಭ ತಾವು ನಡೆದು ಬಂದ ದಾರಿಯನ್ನು ಒಮ್ಮೆ ಹಿಂದಿರುಗಿ ನೋಡುವಂತೆ ಮಾಡಿದೆ.

ಎಂ.ಎಸ್. ವಿಕಾಸ್ ಪತ್ರಿಕೋದ್ಯಮಕ್ಕೆ ಬಂದದ್ದು ಆಕಸ್ಮಿಕವೇನೂ ಅಲ್ಲ. ತಂದೆ ಹೆಚ್.ಎನ್. ಷಡಾಕ್ಷರಪ್ಪ ಜನತಾವಾಣಿಯನ್ನು ಹುಟ್ಟುಹಾಕಿ ಬೆಳೆಸಿದ್ದನ್ನು ಮುಂದುವರೆಸಿಕೊಂಡು ಹೋಗಲು ತಮ್ಮ ಮಗನಿಂದ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡುತ್ತಿದ್ದ ವಿಕಾಸ್‌ಗೆ, 1995ರಲ್ಲಿ ಜನತಾವಾಣಿ ಪತ್ರಿಕೆಯ ಜವಾಬ್ದಾರಿ ಕೈ ಬೀಸಿ ಕರೆಯಿತು. ಪತ್ರಿಕೆಯ ಮಾಲೀಕನಿಗೆ ಪತ್ರಿಕೋದ್ಯಮ ಪದವಿಗಿಂತ, ಪ್ರಾಯೋಗಿಕ ಅನುಭವವೇ ಮುಖ್ಯ ಎಂದು ಅವರಿಗೆ ಅದಾಗಲೇ ತಿಳಿದಿತ್ತು.

ದಾವಣಗೆರೆಯಲ್ಲಿ ಜನತಾವಾಣಿ ಪತ್ರಿಕೆ ಪ್ರಾರಂಭವಾದದ್ದು 1974ರಲ್ಲಿ ಅಂದರೆ ಇನ್ನೊಂದು ವರ್ಷಕ್ಕೆ ಜನತಾವಾಣಿ 50 ವರ್ಷ ಪೂರೈಸುತ್ತದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಪತ್ರಿಕೆಗಳಿಗೆ ಹೊಸ ರೂಪ ಕೊಟ್ಟು ಅವು ನಿರ್ದಿಷ್ಟ ಅಸ್ತಿತ್ವ ಗಳಿಸಿಕೊಂಡು ದೃಢವಾಗಿ ನಿಲ್ಲಬಲ್ಲವು ಎಂಬುದನ್ನು ತೋರಿಸಿಕೊಟ್ಟವರು ಹೆಚ್. ಎನ್. ಷಡಾಕ್ಷರಪ್ಪ. ಪತ್ರಿಕಾ ಪ್ರಪಂಚದಲ್ಲಿ ಸಣ್ಣದಾಗಿ ಕಾಲಿಟ್ಟು ಸ್ಥಳೀಯವಾಗಿ ರೈತ ಪರ ಧೋರಣೆ ಹಾಗೂ ಕಾಲಘಟ್ಟದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಾ ಮಧ್ಯ ಕರ್ನಾಟಕದಲ್ಲಿ ಆಪ್ತ ಒಡನಾಡಿಯಾಗಿ ಬೆಳೆದು ಬಂದದ್ದು ಒಂದು ಅಧ್ಯಾಯವಾದರೆ, ಪತ್ರಿಕೆ ಗಳ ಬೆಲೆ ಪೈಪೋಟಿ ಎದುರಿಸುವುದು ಹಾಗೂ ಮುದ್ರಣ ತಂತ್ರಜ್ಞಾನದ ಸವಾಲನ್ನು ಎದುರಿ ಸಿದ್ದು ಮತ್ತೊಂದು ಅಧ್ಯಾಯ. ಈ ಅಧ್ಯಾಯ ಪ್ರಾರಂಭವಾಗುವುದೇ ವಿಕಾಸ್ ಅವರಿಂದ.

ಪ್ರಸಾರದಲ್ಲಿ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಇದ್ದ ಅಶಿಸ್ತಿನಿಂದಾಗಿ ಲಾಭವನ್ನೇ ಕಾಣದಿದ್ದ ಪತ್ರಿಕೆಗೆ ಉದ್ಯಮದ 'ಟಚ್' ನೀಡಿದ ಫಲವಾಗಿ ಪತ್ರಿಕೆಯು ಜನಪ್ರಿಯತೆಯ ಜೊತೆಗೆ ಸ್ಥಿರತೆಯನ್ನು ಕಾಣುವಂತಾಯಿತು. ವಿಕಾಸ್ ವೃತ್ತಿಯಲ್ಲಿ ಪತ್ರಿಕೋದ್ಯಮಿಯಾದರೂ, ಅಂತರಂಗದಲ್ಲೊಬ್ಬ ಟೆಕಿ ಅವರಲ್ಲಿ ಸದಾ ಜೀವಂತ. ಸ್ಥಳೀಯ ಮಾಧ್ಯಮ ಒತ್ತಟ್ಟಿಗಿರಲಿ, ರಾಜ್ಯ ಮಟ್ಟದ ಪತ್ರಿಕೆಗಳಿಗೂ ದುರ್ಲಭವಾದ ತಂತ್ರಜ್ಞಾನಗಳನ್ನು ಜನತಾವಾಣಿಗೆ ಅಳವಡಿಸಲು ಅವರು ಸದಾ ಪ್ರಯೋಗಶೀಲರು. ಅವರ ಸಾರಥ್ಯದಲ್ಲಿ, 2019ರಲ್ಲಿ ಜನತಾವಾಣಿ ಪತ್ರಿಕೆ ಹದಡಿ ರಸ್ತೆಯಲ್ಲಿ ನೂತನ ಕಚೇರಿ ಹಾಗೂ ಮುದ್ರಣ ವ್ಯವಸ್ಥೆಗೆ ಸ್ಥಳಾಂತರಗೊಂಡಿತು. ಮುದ್ರಣ ಪುಟಗಳ ವಿಸ್ತಾರವೂ ಹೆಚ್ಚಾಯಿತು.

1996 ರಲ್ಲಿ ಸಹ ಸಂಪಾದಕರು ಹಾಗೂ 2011ರಲ್ಲಿ ಸಂಪಾದಕರಾದ ವಿಕಾಸ್, ಪತ್ರಿಕೆಗೆ ಸೇರಿದ ಆರಂಭದ ದಿನಗಳಲ್ಲಿನ ಉತ್ಸಾಹವನ್ನು ಇಂದಿಗೂ ಅದೇ ಸ್ತರದಲ್ಲಿ ಉಳಿಸಿಕೊಂಡಿದ್ದಾರೆ. ದೇಹಕ್ಕೆ 50 ಆಗಿದ್ದರೂ ಮನಸ್ಸಿನಲ್ಲಿ ಈಗಲೂ 1995ರಲ್ಲಿ ಪತ್ರಿಕೆಯ ಮೊದಲ ಹೆಜ್ಜೆ ಇರಿಸಿದ ಯುವಕನೇ ಆಗಿದ್ದಾರೆ. ಹೊಸತನ್ನು ನಿತ್ಯ ಕಲಿಯುವ ಹಾಗೂ ಕಲಿತಿದ್ದನ್ನು ಪತ್ರಿಕೆಯ ಮೂಲಕ ತಲುಪಿಸುವ ನಿರಂತರ ತುಡಿತವಿದೆ.

ವಿಕಾಸ್, ಜೀವನದಲ್ಲಿ ಎಂದಿಗೂ ಯಥಾಸ್ಥಿತಿ ವಾದಿಯಾಗಿ ನಿಂತವರಲ್ಲ. ನಿತ್ಯ ಹೊಸ ಸವಾಲುಗಳಿದ್ದರೇನೇ ಜೀವನ ಚಂದ ಎಂಬುದೇ ಅವರ 'ವಿಕಾಸ'ವಾದ. ಹೀಗಾಗಿಯೇ ಪತ್ರಿಕೋದ್ಯಮದ ಸವಾಲುಗಳು ಅವರನ್ನು ಕಂಗೆಡಿಸಲಿಲ್ಲ, ಬದಲಿಗೆ ಕಂಗೊಳಿಸಿದವು. ಸವಾಲುಗಳಿಗೆ ಅವರು ಸಂಯಮದ ಮೂಲಕ ಉತ್ತರಗಳನ್ನು ಕಂಡುಕೊಂಡರು. ಒತ್ತಡದ ನಡುವಿನ ಅವರ ಸಮಾಧಾನದ ಗುಟ್ಟು ಅವರ ನಿಕಟವರ್ತಿಗಳಿಗೂ ಚಿದಂಬರ ರಹಸ್ಯವಾಗಿದೆ.

ಸಾಮಾನ್ಯವಾಗಿ ಸ್ಥಳೀಯ ಪತ್ರಿಕೆಗಳು ಸಂಪಾದಕರನ್ನೇ ಅತಿಯಾಗಿ ಅವಲಂಬಿಸಿರುತ್ತವೆ. ಆದರೆ, ಜನತಾವಾಣಿ ಪತ್ರಿಕೆ ಆ ರೀತಿ ಆಗಬಾರದು ಎಂಬುದು ವಿಕಾಸ್ ಅವರ ದೃಢ ನಿಲುವು. ಹೀಗಾಗಿಯೇ ಅವರು ತಾವು ಪತ್ರಿಕೋದ್ಯಮದಲ್ಲಿ ತಿಳಿದ ತಾಂತ್ರಿಕ ಅಂಶಗಳಿಂದ ಹಿಡಿದು ಬರವಣಿಗೆ, ಮುದ್ರಣದಿಂದ ಹಿಡಿದು ವಹಿವಾಟಿನವರೆಗೆ ಎಲ್ಲ ವಿಷಯಗಳಲ್ಲಿ ಸಿಬ್ಬಂದಿಯನ್ನು ಸಜ್ಜುಗೊಳಿಸುತ್ತಾರೆ.

ಪತ್ರಿಕೋದ್ಯಮ ಜೀವನಕ್ಕಾದರೆ, ಜೀವಂತಿಕೆಗೆ ಅವರು ಕಂಡುಕೊಂಡಿದ್ದು ಕೃಷಿ. ಪತ್ರಿಕೆಯ ಸವಾಲನ್ನು ಮಗನ ಹೆಗಲಿಗೆ ಹಾಕಿದ್ದ ಹೆಚ್ಚೆನ್ನೆಸ್, ಬರಡಾಗಿದ್ದ ಜಮೀನನ್ನು ಹಸಿರಾಗಿಸುವ ಸವಾಲನ್ನೂ ಒಡ್ಡಿದರು. 2005ರ ಸಮಯದಲ್ಲಿ ಆಲೂರಿನ ಬಳಿ ಬರಡಾಗಿದ್ದ ತಿಟ್ಟನ್ನು ಹಚ್ಚ ಹಸಿರಾಗಿ ಮಾಡಿ ಸೈ ಎನಿಸಿಕೊಂಡರು. ಅವಸರದ ಜಗತ್ತಿನ ಪತ್ರಿಕೋದ್ಯಮ, ಪ್ರಶಾಂತ ಚಲನೆಯ ಕೃಷಿ ಎರಡಕ್ಕೂ ಒಗ್ಗಿಕೊಳ್ಳುವ ಗುಣ ಅವರದ್ದು.

ಜನಸಂಪರ್ಕದಲ್ಲಿ ಸ್ವಲ್ಪಮಟ್ಟಿಗೆ 'ರಿಸರ್ವ್' ಎನಿಸಿದರೂ ಆಪ್ತರ ಒಡನಾಟದಲ್ಲಿ ವಿಚಾರಗಳ ಸರಪಳಿಯನ್ನೇ ಬಿಚ್ಚುವರು. ಪತ್ರಿಕೆಗಳಿಗೆ ಬರುವ ಸುದ್ದಿಯಾಗಲೀ, ಸಾರ್ವಜನಿಕವಾಗಿ ಚರ್ಚಿತವಾಗುವ ಸಂಗತಿಗಳನ್ನಾಗಲೀ ಚಿಕಿತ್ಸಕ ದೃಷ್ಟಿಯಿಂದ ನೋಡುವುದು, ಧರ್ಮಸೂಕ್ಷ್ಮಗಳನ್ನು ಗೌರವಿಸುವ ಜಾಯಮಾನ ಮೊದಲಿನಿಂದಲೂ ಇದ್ದದ್ದೇ.

ಅದೃಷ್ಟ, ಯಶಸ್ಸು ಎರಡೂ ಕಂಡಿರುವ ವಿಕಾಸ್ ತುಂಬು ಕುಟುಂಬ ಜೀವಿ. ತಾಯಿ ಜಯಶೀಲಾ ಷಡಾಕ್ಷರಪ್ಪ, ಪತ್ನಿ ಶ್ರೀಮತಿ ನೀತಾ ವಿಕಾಸ್, ಮಕ್ಕಳಾದ ಜಯಧರ ಹಾಗೂ ಪ್ರೇರಣ ಇರುವ ಮುದ್ದಿನ ಸಂಸಾರ. ಸಂಪಾದಕರ ಸಾರ್ಥಕ ಜೀವನಕ್ಕೆ ಕುಟುಂಬದ ಬೆಂಬಲವೂ ಅಪಾರ.

ಜೀವನದ ಯಶಸ್ಸು ಇತರರ ದೃಷ್ಟಿಯಲ್ಲಿ ಇರುತ್ತದೆ. ಏಕೆಂದರೆ ಯಶಸ್ಸು ಎನ್ನುವುದು ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ಇರುತ್ತದೆ. ಒಬ್ಬರಿಗೆ ಹಣ ಸಂಪಾದನೆಯೇ ಒಂದು ಸಾಧನೆಯಾದರೆ, ಮತ್ತೊಬ್ಬರಿಗೆ ಅಧಿಕಾರ, ಕೀರ್ತಿ ಹೀಗೆಲ್ಲಾ ದೃಷ್ಟಿಗಳಿವೆ. ಯಶಸ್ವಿ ಜೀವನಕ್ಕಿಂತ ಸಂತೃಪ್ತ ಜೀವನವೇ ಮುಖ್ಯ ಎನ್ನುವುದು ವಿಕಾಸವಾದ.

ಅವರ ಸಾಧನೆಯ ಉತ್ತುಂಗ ಇನ್ನೂ ದೂರವಿದೆ. ಸಾಧನೆಯ ಮೆಟ್ಟಿಲುಗಳು ಕಾಯುತ್ತಿವೆ. ಜೀವನದ ವಿಕಾಸ ಎಂದೂ ನಿಲ್ಲದ ರೀತಿಯಲ್ಲೇ, ವಿಕಾಸ್ ಸಹ ನಿಲ್ಲದೇ ಮುನ್ನಡೆಯಲಿ ಎಂಬುದು ನಮ್ಮೆಲ್ಲರ ಹಾರೈಕೆ.

- ಎಂ.ಎಸ್. ಶರಣ್





# ದೇವನಗರಿಯಲ್ಲಿ ಬಣ್ಣದಾಟದ ಸಂಭ್ರಮ

## ಪಿಚಕಾರಿಯಿಂದ ಚಿಣ್ಣರ ಚಿನಕುರುಳಿ, ರಾಂ ಅಂಡ್ ಕೋ ದಲ್ಲಿ ಮಸ್ತ್ ಡ್ಯಾನ್ಸ್, ತ್ರಿಬ್ಬಲ್ ರೈಡಿಂಗ್

ದಾವಣಗೆರೆ, ಮಾ. 8- ಹೋಳಿ ಅಂದರೇನೇ ಹಾಗೆ, ಚಿಣ್ಣರಲ್ಲಿ, ಯುವಕ-ಯುವತಿಯರಲ್ಲಿ ಉತ್ಸಾಹ ಪುಟಿದೇಳುತ್ತದೆ. ನಗರದಲ್ಲೂ ಬುಧವಾರ ಹೋಳಿ ಹಬ್ಬದಲ್ಲಿ ಯುವ ಪಡೆ ಮಿಂದೆದ್ದಿತು.

ಒಬ್ಬರಿಗೊಬ್ಬರು ಗುರುತು ಹಿಡಿಯದಷ್ಟು ಮುಖಕ್ಕೆ ಬಣ್ಣ. ಸ್ನೇಹಿತರು, ಸಂಬಂಧಿಗಳನ್ನು ಭೇಟಿ ಮಾಡಿ ಹ್ಯಾಪಿ ಹೋಳಿ ಎನ್ನುತ್ತಲೇ ಬಣ್ಣ ಮೆತ್ತುತ್ತಾ ಸಂಭ್ರಮಿಸಿದರು.

ಚಿಣ್ಣರಂತೂ ಪಿಚಕಾರಿ ಹಿಡಿದು ಬಣ್ಣದ ನೀರು ಮಿಶ್ರಣ ಮಾಡಿಕೊಂಡು ಸ್ನೇಹಿತರಿಗೆ, ದಾರಿಹೋಕರಿಗೆ ನೀರು ಸಿಡಿಸಿ ಸಂಭ್ರಮಿಸಿದ್ದೇ ಸಂಭ್ರಮಿಸಿದ್ದು. ಬೆಳಿಗ್ಗೆ 8ರ ಹೊತ್ತಿಗಾಗಲೇ ಚಿಣ್ಣರ ಕೈಯಲ್ಲಿ ಪಿಚಕಾರಿಗಳಿದ್ದವು. ಬೇಕಾದ ಬಣ್ಣ ಹಾಗೂ ಪಿಚಕಾರಿ ಹಿಂದಿನ ದಿನ ರಾತ್ರಿಯೇ ಖರೀದಿಯಾಗಿದ್ದವು.

ಮನೆಗಳ ಮುಂದೆ, ಓಣಿಗಳಲ್ಲಿ ಬಣ್ಣದಾಟ ಸಂಭ್ರಮಿಸಿದ ಯುವಕ-ಯುವತಿಯರು ತಿರುಗಿದ್ದು ಹೋಳಿ ಎಂದಾಕ್ಷಣ ಮನದಲ್ಲಿ ಮೂಡುವ ರಾಂ ಅಂಡ್ ಕೋ ವೃತ್ತದ ಕಡೆಗೆ. 10 ಗಂಟೆ ನಂತರ ಇಡೀ ನಗರದ ಯುವ ಪಡೆ ಹರಿದು ಸರ್ಕಲ್ ಬಣ್ಣಮಯವಾಗಿತ್ತು.

ಬಣ್ಣದಾಟದ ಉತ್ಸಾಹ ಬಡಿದೆಬ್ಬಿಸಲೆಂದೇ ಡಿಜೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಸರ್ಕಲ್ ಮಧ್ಯದ ಕಂಬದ ಬಳಿ ಸ್ಪಿಂಕ್ಲರ್ ಮೂಲಕ ನೀರು ಸಿಂಪರಣೆ ವ್ಯವಸ್ಥೆ ಇತ್ತು. ಇಷ್ಟು ಸಾಕು ಬೇಡ ಎಂದವರೂ ಬಂದು ಕುಣಿಯಲು. 12 ಗಂಟೆವರೆಗೆ ಕುಣಿದು ದಣಿದು ಕೆಲವರು ಮನೆಯತ್ತ ಹೆಜ್ಜೆ ಹಾಕಿದರೆ. ಮತ್ತೆ ಕೆಲವರು ಅದೇ ತಂಡ ಬೈಕುಗಳ ಮೂಲಕ ಚಾನಲ್ ಕಡೆ ಹೊರಟರು.

ಸಂಭ್ರಮ ತೋರಿಸಲೆಂದೇ ಪೋಷಕರು ತಮ್ಮ ಮಕ್ಕಳನ್ನು ಕರೆ ತಂದಿದ್ದರು. ಹೆಗಲ ಮೇಲೆ ಹೊತ್ತು ತಾವೂ ಸಂಭ್ರಮಿಸಿದರು. ಇತ್ತ ಹುಡುಗರಿಗಿಂತ ನಾವೇನು ಕಮ್ಮಿ? ಎಂದು ಪ್ರಶ್ನಿಸುತ್ತಲೇ ಸಂಭ್ರಮಾಚರಣೆಗೆ ಇಳಿದು ಹುಡುಗಿಯರೂ ಡಿಜೆ ಧ್ವನಿವರ್ಧಕದ ಸದ್ದಿಗೆ ಹೆಜ್ಜೆ ಹಾಕಿದರು. ಯುವತಿಯರ ಸಂಭ್ರಮಕ್ಕೆ ವೃತ್ತದ ಮತ್ತೊಂದು ಬದಿ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿತ್ತು. ಪುರುಷ ಹಾಗೂ ಮಹಿಳಾ ಹಾಸ್ಟೆಲ್‌ಗಳಲ್ಲಿ ಹೋಳಿ ಆಟದ ಸಂಭ್ರಮ ಹೆಚ್ಚಾಗಿಯೇ ಇತ್ತು.

ಹೋಳಿ ಸಂಭ್ರಮ ಹೆಚ್ಚಾಗಿ ಕಂಡದ್ದು ಹಳೆ ದಾವಣಗೆರೆಯಲ್ಲಿಯೇ. ಜಾಲಿನಗರ, ಬೇತೂರು ರಸ್ತೆ, ಕಾಯಿಪೇಟೆ, ಚಾಮರಾಜ ಪೇಟೆಗಳಲ್ಲಿ ಅಲ್ಲಲ್ಲಿ, ಹಲಗೆ ಭಾರಿಸುತ್ತಾ ಮಡಿಕೆ ಕಟ್ಟಿ ಹೊಡೆದು ಸಾಂಪ್ರದಾಯಿಕ ಹೋಳಿ ಆಚರಿಸಿದರು.

ತ್ರಿಬಲ್ ರೈಡ್ ಮಾಡದಿದ್ದರೆ, ಹಾಕಿಕೊಂಡಿದ್ದ ಬಟ್ಟೆಗಳನ್ನು ಕಿತ್ತು ತೂರಿ ಅರೆ ಬೆತ್ತಲೆಯಾಗಿ, ಕೂಗುತ್ತಾ, ಹಾರನ್ ಹಾಕುತ್ತಾ ಕೆಲ ಯುವಕರ ಪಾಲಿಗೆ ಹೋಳಿ ಸಂಭ್ರಮ ಪೂರ್ಣಗೊಳ್ಳದು ಎಂಬಂತೆ ಇಂದೂ ಸಹ ಅದನ್ನೇ ಅನುಸರಿಸಿದರು.





### ನೈಸರ್ಗಿಕ ಹೋಳಿ ಆಚರಣೆ

**ಹೋಳಿ ಹಬ್ಬದ ಪ್ರಯುಕ್ತ ಎಸ್.ಎಸ್. ಲೇಔಟ್‌ನ ಮಹಿಳೆಯರು ಹಾಗೂ ವಚನಾಮೃತ ಮಹಿಳಾ ಬಳಗದಿಂದ ನೈಸರ್ಗಿಕ ಹೋಳಿ ಆಚರಿಸಲಾಯಿತು. ಹಣ್ಣು ತರಕಾರಿ ಸೊಪ್ಪು ಇವುಗಳಿಂದ ತಯಾರಿಸಿದ ಮಿಶ್ರಣದಿಂದ ಬಣ್ಣಗಳನ್ನು ತಯಾರಿಸಲಾಗಿತ್ತು.**

**ಸೌಮ್ಯ ಸತೀಶ್ ಆಯೋಜಿಸಿದ ಈ ಕಾರ್ಯಕ್ರಮದಲ್ಲಿ ಮಧು, ಶಾಂತ, ರತ್ನ, ಶ್ರೇಯಾ, ಶಿಲ್ಪ, ಸರಿತಾ, ಸುರೇಖಾ, ಸುಧಾ, ಭಾರತಿ, ಸರೋಜಾ, ಹೇಮಾವತಿ, ಕಾತ್ಯಾಯಿನಿ, ಕವಿತಾ, ಸೌಮ್ಯ ಕಿರಣ್, ಶ್ವೇತಾ ಕಿರಣ್, ಗೀತಾ, ದೀಪ, ತನುಜಾ, ಸರಿತಾ, ಸುಮಾ ಮುಂತಾದವರು ಪಾಲ್ಗೊಂಡಿದ್ದರು. ವಚನಾಮೃತ ಬಳಗದಿಂದ ಇಂದು ವಿಶ್ವ ಮಹಿಳಾ ದಿನಾಚರಣೆಯನ್ನೂ ಸಹ ಆಚರಿಸಿ, ಸಿಹಿ ಹಂಚಲಾಯಿತು.**

# ಕಾಂಗ್ರೆಸ್‌ನ ಬಂದ್ ವಾಪಸ್

ಬೆಂಗಳೂರು, ಮಾ. 8 - ದ್ವಿತೀಯ ಪಿಯುಸಿ ಪರೀಕ್ಷೆ ಸೇರಿದಂತೆ ರಾಜ್ಯಾದ್ಯಂತ ಶಾಲಾ- ಕಾಲೇಜುಗಳ ಪರೀಕ್ಷೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರ ಒತ್ತಡದ ಮೇರೆಗೆ ನಾಳೆ ನಡೆಸಬೇಕಿದ್ದ ಸಾಂಕೇತಿಕ ಕರ್ನಾಟಕ ಬಂದನ್ನು ವಾಪಸ್ ತೆಗೆದುಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕರ ಜತೆ ಸಮಾಲೋಚನೆ ನಡೆಸಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಶಿವಕುಮಾರ್ ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಸರ್ಕಾರದ ಮಿತಿಮೀರಿದ ಭ್ರಷ್ಟಾಚಾರವನ್ನು ವಿರೋಧಿಸಿ ಹಾಗೂ ಮುಖ್ಯಮಂತ್ರಿಗಳ ರಾಜೀನಾಮೆಗೆ ಆಗ್ರಹಿಸಿ ಮಾ.9 ರ ಬೆಳಗ್ಗೆ 9 ಗಂಟೆಯಿಂದ 11 ರವರೆಗೆ ಎರಡು ಗಂಟೆಗಳ ಕಾಲ ಸಾಂಕೇತಿಕ ಬಂದ್ ಮಾಡಲು ಕಾಂಗ್ರೆಸ್ (2ನೇ ಪುಟಕ್ಕೆ)






# ಸಾಹಿತಿ ಸುಕನ್ಯಾ ತ್ಯಾವಣಿಗಿ ಅವರಿಗೆ 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿ



ದಾವಣಗೆರೆ, ಮಾ.8- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಲ್ಲಿಸುತ್ತಿರುವ ಅನುಪಮ ಸೇವೆಗೆ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕೊಡಮಾಡುವ 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿಗೆ ನಗರದ ಹಿರಿಯ ಸಾಹಿತಿ ಶ್ರೀಮತಿ ಸುಕನ್ಯಾ ತ್ಯಾವಣಿಗಿ ಭಾಜನರಾಗಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇಂದು ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುಕನ್ಯಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. (2ನೇ ಪುಟಕ್ಕೆ)

# ಬೇಸಿಗೆಯಲ್ಲಿ ವಿದ್ಯುತ್ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ



ಬೆಂಗಳೂರು, ಮಾ. 8- ಬೇಸಿಗೆಯಲ್ಲಿ ಬೆಳೆಗಳಿಗೆ ನೀರು ಹರಿಸಲು ವಿದ್ಯುತ್ ಸಮಸ್ಯೆಯಾಗದಂತೆ ರಾಜ್ಯ ಸರ್ಕಾರ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ತಮ್ಮನ್ನು ಭೇಟಿಯಾದ ರೈತರ ನಿಯೋಗದೊಂದಿಗೆ ರೈತರ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಿದರು.

ವಿದ್ಯುತ್ ಕೊರತೆ ಉಂಟಾದಲ್ಲಿ ಹೊರ ರಾಜ್ಯಗಳಿಂದ ಪೂರೈಕೆ ಮಾಡುವ ಕುರಿತು ಸಹ ಚಿಂತನೆ ಮಾಡಲಾಗುವುದು. ಅಲ್ಲದೆ ರೈತರ ಪಂಪ್ ಸೆಟ್‌ಗಳಿಗೆ ನಿರಂತರ ಏಳು ತಾಸು 3 ಫೇಸ್ ವಿದ್ಯುತ್ ಪೂರೈಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದ ವಿವಿಧೆಡೆ ಕೆಐಎಡಿಬಿಯು ಭೂ ಸ್ವಾಧೀನ (2ನೇ ಪುಟಕ್ಕೆ)

# ಗಣ್ಯರಿಗೇಕೆ ತ್ವರಿತ ಜಾಮೀನು?

## ಆಕ್ಷೇಪಿಸಿ ಸಿ.ಜೆ.ಐ.ಗೆ ಪತ್ರ ಬರೆದ ವಕೀಲರ ಒಕ್ಕೂಟ

ಬೆಂಗಳೂರು, ಮಾ. 8 – ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಒಂದೇ ದಿನದಲ್ಲಿ ವಿಚಾರಣೆಗೆ ಕೈಗೆತ್ತಿಕೊಂಡ ಬಗ್ಗೆ ಆಕ್ಷೇಪಿಸಿರುವ ಬೆಂಗಳೂರು ವಕೀಲರ ಒಕ್ಕೂಟ, ಈ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿ.ಜೆ.ಐ.) ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿದೆ.

ನಿರೀಕ್ಷಣಾ ಜಾಮೀನಿನಂತಹ ಅರ್ಜಿಗಳನ್ನು ಹೈಕೋರ್ಟ್‌ನಲ್ಲಿ ದಾಖಲಿಸಲು ಹಲವು ದಿನ ಹಾಗೂ ವಾರಗಳೇ ಬೇಕಾಗುತ್ತವೆ. ಆದರೆ, ಗಣ್ಯಾತಿ ಗಣ್ಯರ ವಿಷಯಗಳನ್ನು ರಾತ್ರೋರಾತ್ರಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಸಂಘ ಪತ್ರದಲ್ಲಿ ಹೇಳಿದೆ.

ಈ ಪದ್ಧತಿಯಿಂದಾಗಿ ಜನ ಸಾಮಾನ್ಯರು ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆ ಕಳೆದುಕೊಳ್ಳುವಂತಾಗಿದೆ. ಶಾಸಕರನ್ನೂ ಸಹ ಜನಸಾಮಾನ್ಯರಂತೆ ಕಾಣುವುದು ಅಗತ್ಯವಾಗಿದೆ ಎಂದು ಸಂಘ ಹೇಳಿದೆ.

ಜನ ಸಾಮಾನ್ಯರನ್ನೂ ಸಹ ಗಣ್ಯರಿಗೆ ಸಮಾನವಾಗಿ ಪರಿಗಣಿಸುವಂತಾಗಲು, ಎಲ್ಲಾ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಒಂದೇ (2ನೇ ಪುಟಕ್ಕೆ)

# ಕೋಟಿ ಸಂಪಾದನೆಗೆ ಮಾಡಾಳ್ ತಳಿ ಅಡಿಕೆ!

## ಬಿಜೆಪಿ ಹಾಗೂ ಶಾಸಕ ವಿರೂಪಾಕ್ಷಪ್ಪಗೆ ಜೆಡಿಎಸ್ ಲೇವಡಿ




ಬೆಂಗಳೂರು, ಮಾ. 8 - ಅಡಿಕೆ ಬೆಳೆದು ಕೋಟಿ ಕೋಟಿ ಸಂಪಾದಿಸಬೇಕಾ? ಹಾಗಾದ್ರೆ ಮಾಡಾಳ್ ತಳಿಯ ಅಡಿಕೆ ಗಿಡಗಳನ್ನು ಬೆಳೆಸಿ, ಕೋಟ್ಯಾಂತರ ರೂಪಾಯಿ ಸಂಪಾದಿಸಿ...

ಹೀಗೆಂದು ಚನ್ನಗಿರಿಯ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಬಿಜೆಪಿಯನ್ನು ಜೆಡಿಎಸ್ ಪಕ್ಷವು ಲೇವಡಿ ಮಾಡಿದೆ.

ಲೋಕಾಯುಕ್ತ ದಾಳಿಯ ವೇಳೆ ತಮ್ಮ ಮನೆಯಲ್ಲಿ ಪತ್ತೆಯಾದ 8 ಕೋಟಿ ರೂ. ಹಣ ಅಡಿಕೆ ಬೆಳೆ ಮತ್ತಿತರೆ ವಹಿವಾಟುಗಳಿಂದ ಬಂದಿದ್ದು ಎಂದು ಶಾಸಕ ವಿರೂಪಾಕ್ಷಪ್ಪ ಹೇಳಿದ್ದರು.

ಲಂಚ ಪ್ರಕರಣದ ಪ್ರಮುಖ ಆರೋಪಿಯನ್ನು ಬಿಜೆಪಿ ಕಾರ್ಯಕರ್ತರು 'ಭಾರತ್ ಮಾತಾ ಕಿ ಜೈ' ಎಂದು ಕೂಗುತ್ತಾ ಅದ್ದೂರಿ (4ನೇ ಪುಟಕ್ಕೆ)

# ಬಿಜೆಪಿಯಲ್ಲಿ ನಾಚಿಕೆಯ ಕೆಲಸ

## ಮಾಡಾಳ್ ಸ್ಪಷ್ಟನೆ ಒಪ್ಪಲಾಗದು : ವಿಶ್ವನಾಥ್



ಬೆಂಗಳೂರು, ಮಾ. 8 - ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಬೆಂಗಳೂರಿನಲ್ಲಿ ಇಲ್ಲದಿದ್ದರೂ ಪೊಲೀಸರು ಇಲ್ಲೇ ಹುಡುಕುತ್ತಿದ್ದಾರೆ. ಮೋದಿ ಡಿಜಿಟಲ್ ಇಂಡಿಯಾ ಅಂತಾರೆ, ಫೋನ್ ಪೇ ಎಲ್ಲಾ ಅಂತಾರೆ, ಹಾಗಿದ್ರೆ ಮನೆಯಲ್ಲಿ ಇಷ್ಟು ಹಣ ಎಲ್ಲಿಂದ ಬಂತು? ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಸ್ವಪಕ್ಷದ ಮೇಲೆ ಗುಡುಗಿದರು.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಇವರು, ಬಿಜೆಪಿ ಪಕ್ಷದಲ್ಲಿ ನಾಚಿಕೆ ಉಂಟಾಗುವ ಕೆಲಸವಾಗಿದೆ. ಪಕ್ಷ ನಿಮಗೆ ತಾಯಿ ಇದ್ದ ಹಾಗೇ ಅದಕ್ಕೆ ಮೋಸ ಮಾಡಬೇಡಿ ಎಂದರು.

ಯಾವ ರೀತಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದು ಮಾಡಾಳ್ ಪ್ರಕರಣದಲ್ಲಿ ಗೊತ್ತಾಗುತ್ತದೆ. ಸರ್ಕಾರದ ವಕೀಲರು ಬರಲೇ ಇಲ್ಲ. ರಾಜ್ಯದ ವಿಷಯ ಪ್ರಮುಖವೇ ಹೊರತು ಪಾರ್ಟಿ ಅಲ್ಲ. ಬಿಜೆಪಿ ಶಾಸಕರ ಮನೆಯಲ್ಲಿ ಇಷ್ಟು ಹಣ ಇರುವ ಬಗ್ಗೆ ನೀಡಲಾಗಿರುವ ಸ್ಪಷ್ಟನೆಯನ್ನು ಒಪ್ಪಿಕೊಳ್ಳಲಾಗದು. ಸರ್ಕಾರ ಕೂಡ ಒಪ್ಪಿಕೊಳ್ಳಬಾರದು ಎಂದರು

ಮಾಡಾಳ್ ವಿರೂಪಾಕ್ಷ ಅವರೇ, ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಿ. ಇವರೆಲ್ಲ ಮೋದಿ ವಿರೋಧಿಗಳು. ಇಷ್ಟೆಲ್ಲ ಭ್ರಷ್ಟಾಚಾರವಾಗುತ್ತಿದ್ದರು ಮುಖ್ಯಮಂತ್ರಿಯವರು ಏನು ಮಾಡುತ್ತಿದ್ದಾರೆ? ಎಂದು ಪ್ರಶ್ನಿಸಿದರು.

ಮಾಡಾಳ್ ವಿಷಯದಲ್ಲಿ ದೊಡ್ಡ ಪ್ರಹಸನ ನಡೆದಿದೆ. ಸರ್ಕಾರದ ಪರ ವಕೀಲರು ಜಾಮೀನು ವಿಚಾರಣೆ ವೇಳೆ ಇರಲಿಲ್ಲ. ಕಿರಿಯ ವಕೀಲರು ಬಂದಿದ್ದರೂ ಬಾಯಿ ಬಿಡಲಿಲ್ಲ. ಲೋಕಾಯುಕ್ತದ ಇಬ್ಬರು ಅಧಿಕಾರಿಗಳನ್ನು ತುರ್ತಾಗಿ ವರ್ಗಾವಣೆ ಮಾಡಲಾಗಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಬೆಂಗಳೂರು ವಕೀಲರ ಸಂಘ ಪತ್ರ ಬರೆದಿದೆ ಎಂದು ವಿಶ್ವನಾಥ್ ಹೇಳಿದರು.

ಭ್ರಷ್ಟಾಚಾರದ ವಿಚಾರವಾಗಿ ನನಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿಗೂ ಜಗಳವಾಗಿತ್ತು, ನಾನೂ ಕೂಡಾ ಐವತ್ತು ವರ್ಷಗಳಿಂದ ರಾಜಕಾರಣ, ಆಡಳಿತದ ಭಾಗವಾಗಿದ್ದೇನೆ.ಬಿಜೆಪಿ ಶಾಸಕರ ಮನೆಯಲ್ಲಿ ಈ ಪ್ರಮಾಣದ ಹಣ ಸಿಕ್ಕಿರೋದು ಇದೇ ಮೊದಲು. ನಾನು ಅಡಿಕೆ ಬೆಳೆಗಾರ, ನಮ್ಮ ಮನೆಯಲ್ಲಿ ಹಣ ಇರುತ್ತೆ ಅಂತೆಲ್ಲಾ ವಿರೂಪಾಕ್ಷಪ್ಪ ಸಮಜಾಯಿಷಿ ಕೊಟ್ಟಿದ್ದಾರೆ. ಇದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ.

ಒಬ್ಬ ಅಪರಾಧಿ ಎಲ್ಲಿದ್ದಾನೆ ಅಂತಾ ಪೊಲೀಸರಿಗೆ ಗೊತ್ತಿರಲ್ವಾ? ಭ್ರಷ್ಟ ಶಾಸಕನನ್ನು ಮೆರವಣಿಗೆ ಮಾಡ್ತಾರೆ ಅಂದ್ರೆ, ಪೊಲೀಸರು ಹೇಗೆ ಅವಕಾಶ ನೀಡಿದರು? ಎಂದು ತರಾಟೆಗೆ ತೆಗೆದುಕೊಂಡರು.

## ಸಾಕು ಪ್ರಾಣಿಗಳ ಮಾರಾಟ ಮಳಿಗೆಗಳಿಗೆ ಸೂಚನೆ

ದಾವಣಗೆರೆ, ಮಾ.8- ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ, ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳಿಂದ ಪರವಾನಗಿ ಪಡೆಯುವ ಮುನ್ನ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯಲ್ಲಿ 30 ದಿನಗಳ ಒಳಗಾಗಿ ಭರ್ತಿ ಮಾಡಿದ ನಮೂನೆಯಲ್ಲಿ ಅಗತ್ಯ ದಾಖಲೆಗಳು ಹಾಗೂ ನಿಗದಿಪಡಿಸಿದ ಶುಲ್ಕದೊಂದಿಗೆ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ : www.kawb.karnataka.nic.in, ಇ-ಮೇಲ್ :ddveg@gmail.com, ದೂ.ಸಂ : 08192-296832 ಸಂಪರ್ಕಿಸಲು ಜಿಲ್ಲಾ ಪ್ರಾಣಿ ದಯಾಸಂಘದ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಅಪರಾಧಿಗಳ ಜೊತೆ ಸಿಸೋಡಿಯ ಇರಿಸಿಲ್ಲ : ಪೊಲೀಸರ ಸ್ಪಷ್ಟನೆ

ನವದೆಹಲಿ, ಮಾ. 8- ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತ ದೆಹಲಿಯ ಮಾಜಿ ಮುಖ್ಯಮಂತ್ರಿ ಮನೀಶ್ ಸಿಸೋಡಿಯ ಅವರನ್ನು ಇತರೆ ಅಪರಾಧಿಗಳ ಜೊತೆ ಇರಿಸಲಾಗಿದೆ ಎಂದು ಆಮ್ ಆದ್ಮಿ ಪಾರ್ಟಿ ಕಳವಳ ವ್ಯಕ್ತಪಡಿಸಿದೆ. ಆದರೆ, ಪೊಲೀಸರು ಈ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ಸಿಸೋಡಿಯಾರನ್ನು ಇತರೆ ಅಪರಾಧಿಗಳ ಜೊತೆ ಇರಿಸಲಾಗಿದೆ. ಪ್ರತ್ಯೇಕ ಕೋಣೆ ನಿರಾಕರಿಸಲಾಗಿದೆ ಎಂದು ಆಮ್ ಆದ್ಮಿ ಪಾರ್ಟಿ ವಕ್ತಾರ ಸೌರಭ್ ಭಾರದ್ವಜ್ ಹೇಳಿದ್ದಾರೆ.

ನ್ಯಾಯಾಲಯದ ಆದೇಶ ಇದ್ದರೂ ಅವರಿಗೆ 'ವಿಪಸನ' ಸೆಲ್ ಕೊಡಲಾಗುತ್ತಿಲ್ಲ ಎಂದವರು ಆರೋಪಿಸಿದ್ದಾರೆ.

ಈ ಆರೋಪ ನಿರಾಧಾರ ಎಂದಿರುವ ದೆಹಲಿ ಬಂಧೀಖಾನೆ ಅಧಿಕಾರಿಗಳು, ತಿಹಾರ ಕೇಂದ್ರ ಬಂಧೀಖಾನೆಯ ನಂ.1 ಸೆಲ್‌ನಲ್ಲಿ ಇರಿಸಲಾಗಿದೆ. ಇದರಲ್ಲಿ ಕಡಿಮೆ ಖೈದಿಗಳಿದ್ದಾರೆ ಹಾಗೂ ಯಾವುದೇ ಭೂಗತರು ಇಲ್ಲ ಎಂದಿದ್ದಾರೆ. ಭದ್ರತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅವರನ್ನು ಪ್ರತ್ಯೇಕ ವಾರ್ಡ್‌ನಲ್ಲಿ ಇರಿಸಲಾಗಿದೆ. ಇದರಲ್ಲಿ ಅವರು ಧ್ಯಾನ ಮತ್ತಿತರೆ ಚಟುವಟಿಕೆಗಳಲ್ಲಿ ತೊಡಗಲು ಅವಕಾಶ ಇದೆ ಎಂದು ಜೈಲಿನ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಕೈವಾರ ತಾತಯ್ಯ ಜಯಂತಿ ಆಚರಣೆ



ಜಗಳೂರು

ಜಗಳೂರು, ಮಾ.8- ತಾಲೂಕಿನ ತೋರಣಗಟ್ಟೆ ಗ್ರಾಮದಲ್ಲಿ ಬಲಿಜಿಗ ಸಮಾಜದಿಂದ ಕೈವಾರ ತಾತಯ್ಯ ಜಯಂತಿ ಆಚರಿಸಲಾಯಿತು.

ತಹಶೀಲ್ದಾರ್ ಜಿ.ಸಂತೋಷ್‌ಕುಮಾರ್ ಮಾತನಾಡಿ, ದ್ವಾಪರ ಯುಗದಲ್ಲಿ ಸಮಾಜದ ಬದಲಾವಣೆಗೆ ಶ್ರಮಿಸಿದ ಕಾಲಜ್ಞಾನಿ ಕೈವಾರ ತಾತಯ್ಯ ಅವರ ಕೊಡುಗೆ ಅಪಾರವಾಗಿದೆ. ದಾರ್ಶನಿಕರ ತತ್ವಾದರ್ಶಗಳನ್ನು ನಿತ್ಯ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಚಂದ್ರಶೇಖರ್ ಮಾತನಾಡಿ, ಲೌಕಿಕತೆ ತೊರೆದು ಅಧ್ಯಾತ್ಮಿಕತೆಯ ಜಗತ್ತನ್ನು ಪರಿಚಯಿಸಿದ ಯೋಗಿ ನಾರಾಯಣ ಕೈವಾರ ತಾತಯ್ಯ ನಮಗೆ ಆದರ್ಶವಾಗಿದ್ದಾರೆ. ಅವರ ಜಯಂತಿಯನ್ನು ಮುಂದಿನ ದಿನಗಳಲ್ಲಿ ಅದ್ಧೂರಿಯಾಗಿ, ಪಕ್ಷಾತೀತವಾಗಿ ಆಚರಿಸೋಣ ಎಂದು ಕರೆ ನೀಡಿದರು.

ಮೂರು ಶತಮಾನಗಳ ಹಿಂದೆ ಕಾಲಜ್ಞಾನಿ ನುಡಿದಂತೆ ಕತ್ತಿ ಗುರಾಣಿಗಳಿಲ್ಲದೆ, ಯುದ್ಧ ತಂತ್ರಗಳನ್ನು ಅರಿಯದ ರಾಜಕಾರಣಿಗಳು ಭ್ರಷ್ಟಾಚಾರದ ಕೂಪದಲ್ಲಿ ಬಿದ್ದಿರುವುದು ಸತ್ಯ ಸಂಗತಿಯಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಕಾಶ್, ಜಯಕುಮಾರ್, ಲೋಕೇಶ್, ರಾಮಾಂಜನೇಯ, ಬಿ.ಭೀಮಣ್ಣ, ದತ್ತಾತ್ರೇಯ, ರುದ್ರಮುನಿ, ಶ್ರೀನಿವಾಸ್ ಮುಂತಾದವರು ಇದ್ದರು.

# ಮಗುವಿನಲ್ಲಿರುವ ಪ್ರತಿಭೆ ಗುರುತಿಸುವ ಕೆಲಸ ಆಗಬೇಕಿದೆ



ಮಲೇಬೆನ್ನೂರಿನಲ್ಲಿ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್

ಮಲೇಬೆನ್ನೂರು, ಮಾ. 8 - ಪ್ರತಿ ಮಗುವಿನಲ್ಲೂ ಒಂದೊಂದು ಮಹತ್ತರವಾದ ಪ್ರತಿಭೆ ಅಡಕವಾಗಿರುತ್ತದೆ, ಆ ಪ್ರತಿಭೆ ಹೊರ ಹೊಮ್ಮಲು ಅವಕಾಶ ಮತ್ತು ಪರಿಸರ ಮುಖ್ಯವಾಗಿರುತ್ತದೆ ಎಂದು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಹೇಳಿದರು.

ಅವರು ಪಟ್ಟಣದ ಶ್ರೀ ಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಕನ್ನಡ ಮತ್ತು ಆಂಗ್ಲ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ಇವತ್ತಿಗೆ ಬಿಡುಗಡೆಗೊಂಡು ಉತ್ತಮ ಪ್ರದರ್ಶನವಾಗುತ್ತಿರುವ "ತನುಜ" ಚಲನ ಚಿತ್ರವು ಮಕ್ಕಳ ಪ್ರತಿಭೆ ಗುರುತಿಸುವ ನೈಜ ನಿದರ್ಶನವಾಗಿದ್ದು, ಬಡಕುಟುಂಬದ ಹೆಣ್ಣು ಮಗುವು ಹೊಂದಿರುವ ಪ್ರತಿಭೆ ಗಮನಿಸಿದ ಶಿಕ್ಷಕರು, ಪೋಷಕರ, ಸಹಕಾರದಿಂದ " ತನುಜ" ಎಂಬ ವಿದ್ಯಾರ್ಥಿನಿ ನವೋದಯ ಶಾಲೆಗೆ ಆಯ್ಕೆಯಾಗಿ ನಂತರ ಮೆಡಿಕಲ್ ಸೀಟ್ ಪಡೆದ ರೀತಿ ಕುರಿತಾದ ಆ ಚಲನ ಚಿತ್ರವನ್ನು ಪ್ರತಿಯೊಬ್ಬರು ನೋಡಬೇಕೆಂದು ಚಂದ್ರಶೇಖರ್ ಪೂಜಾರ್ ತಿಳಿಸಿದರು.

ತಾ. ಅಕ್ಷರ ದಾಸೋಹ ಅಧಿಕಾರಿ ರಾಮಕೃಷ್ಣಪ್ಪ ಮಾತನಾಡಿ ಶಿಕ್ಷಣ ಪ್ರತಿಯೊಬ್ಬರ ಹಕ್ಕಾಗಿದ್ದು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಒತ್ತು ನೀಡಬೇಕೆಂದರು.

ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮಾತನಾಡಿ, ಇಂದಿನ ಮಕ್ಕಳಿಗೆ ನೈತಿಕ ಶಿಕ್ಷಣದ ಅವಶ್ಯಕತೆ ಇದ್ದು, ಶಿಕ್ಷಕರು ಈ ನಿಟ್ಟಿನಲ್ಲಿ ಶಿಕ್ಷಣ ನೀಡಬೇಕೆಂದರು.

ಬಿಇಓ ಹನುಮಂತಪ್ಪ ಸಿ.ಆರ್.ಪಿ. ನಂಜುಂಡಪ್ಪ ಮಾತನಾಡಿ ಶಿಕ್ಷಣದ ಮಹತ್ವ ತಿಳಿಸಿಕೊಟ್ಟರು.ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ. ವಿಜಯರಾಘವ್, ಉಪಾಧ್ಯಕ್ಷರಾದ ಬಿ. ಚಿದಾನಂದಪ್ಪ, ಕಾರ್ಯದರ್ಶಿ ಹೆಚ್.ಜಿ. ಚಂದ್ರಶೇಖರ್ ನಿರ್ದೇಶಕರಾದ ಡಾ.ಬಿ. ಚಂದ್ರಶೇಖರ್, ಹೆಚ್.ಎಸ್. ವೀರಭದ್ರಯ್ಯ, ಎಂ.ಆರ್. ಮಾದಪ್ಪ, ಎಂ.ಕೆ. ಶರೀಫ್‌ಕುಮಾರ ಮತ್ತಿತರರು ಹಾಜರಿದ್ದರು.

ಪುರಸಭೆ ಸದಸ್ಯರಾದ ಶ್ರೀ ಮತಿ ವಿಜಯಲಕ್ಷ್ಮಿ, ಕೆ.ಪಿ. ಗಂಗಾಧರ್, ಶ್ರೀ ಮತಿ ಸುಧಾ, ಪಿ.ಆರ್. ರಾಜು, ಬಿ. ಮಂಜುನಾಥ್, ಬೆಣ್ಣೆ ಹಳ್ಳಿ ಸಿದ್ದೇಶ್, ಹಾಲಿವಾಣ ಗ್ರಾ.ಪಂ. ಅಧ್ಯಕ್ಷ ಡಿ.ಡಿ. ಚಿಕ್ಕಣ್ಣ ಮತ್ತಿತರರನ್ನು ಈ ವೇಳೆ ಸನ್ಮಾನಿಸಲಾಯಿತು. ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಸ್ವಾಗತಿಸಿದರು.

## ಹಿರೇಬಿದರಿ-ಮಾಕನೂರಲ್ಲಿ ಪಿಯು ಕಾಲೇಜು



ಸಚಿವ ಕೋಟಾ ಶ್ರೀನಿವಾಸ ಪೂಜಾರಿ

ರಾಣೇಬೆನ್ನೂರು, ಮಾ.8 - ಬರುವ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ 100 ವಸತಿಯುತ ಪೌಢ ಶಾಲೆಗಳಲ್ಲಿ ಪಿಯು ಕಾಲೇಜ್ ಸ್ಥಾಪಿಸಲಾಗುವುದು. ಜೊತೆಗೆ ಮಕ್ಕಳಿಗೆ ಗುಣಮಟ್ಟದ ಊಟ ಕೊಡಲು ಪ್ರತ್ಯೇಕ ಟೆಂಡರ್ ಕರೆಯಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಹೇಳಿದರು.

ಹಿರೇಬಿದರಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ವಸತಿ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿದ ಸಚಿವರು,ರಾಜ್ಯದ 100 ಶಾಲೆಗಳಲ್ಲಿ ಹಿರೇಬಿದರಿ ಮತ್ತು ಮಾಕನೂರ ಶಾಲೆಗಳು ಸೇರಿದ್ದು ಅತೀ ಶೀಘ್ರದಲ್ಲೇ ಅಧಿಕೃತ ಸರ್ಕಾರಿ ಆದೇಶ ಹೊರಬೀಳಲಿದೆ ಎಂದರು.

ಶಾಸಕ ಅರುಣಕುಮಾರ ಪೂಜಾರ ಮಾತನಾಡಿ, ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಹಿಂದೇಟು ಹಾಕುತ್ತಿದ್ದ ಪಾಲಕರು, ತಮ್ಮ ಮಕ್ಕಳ ಪ್ರವೇಶಾತಿ ಪಡೆಯಲು ಸರ್ಕಾರಿ ಶಾಲೆಗಳ ಎದುರು ಸರತಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಬರಲಿದೆ ಎಂದರು.

ಸಾರಿಗೆ ಸಂಸ್ಥೆ ಅಧ್ಯಕ್ಷ ಡಾ.ಬಸವರಾಜ ಕೇಲಗಾರ, ನಗರಸಭೆ ಸದಸ್ಯ ಪ್ರಕಾಶ ಪೂಜಾರ, ಶಿವಕುಮಾರ ನರಸಗೊಂಡರ, ಗುಡ್ಡಪ್ಪ ಓಲೇಕಾರ ಮತ್ತಿತರರಿದ್ದರು.

ಈ ವೇಳೆ ಮಾಕನೂರಿನಲ್ಲಿ ಬಸ್ ನಿಲ್ದಾಣ ಶಂಕುಸ್ಥಾಪನೆ, ಸ್ಮಶಾನ ರಸ್ತೆ ಅಭಿವೃದ್ಧಿ, ಜಲ್ ಜೀವನ್ ಮಿಷನ್ ಯೋಜನೆಗೆ ಚಾಲನೆ, ಸಚಿವರ 10 ಕೋಟಿ ಅನುದಾನದಲ್ಲಿ ಕರೂರ ಪರಿಶಿಷ್ಟ ಜಾತಿ ಬಡಾವಣೆಯಲ್ಲಿ ನೂರು ಮನೆ ನಿರ್ಮಾಣಕ್ಕೆ ಚಾಲನೆ, ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಎಲೆಕ್ಟ್ರಿಕ್ ಬೈಕ್ ವಿತರಣೆ, ತುಂಗಾ ಮೇಲ್ದಂಡೆ ಕೊಳವೆ ಬಾವಿ ಸಲಕರಣೆ ವಿತರಣೆ ಕಾರ್ಯಕ್ರಮಗಳು ನಡೆದವು.

# ದೇಶದ ಪ್ರಗತಿಗೆ ಮಹಿಳೆಯರ ಕೊಡುಗೆ ಅಪಾರ

## ಜಗಳೂರಿನ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಪ.ಪಂ ಉಪಾಧ್ಯಕ್ಷೆ ನಿರ್ಮಲ



ಜಗಳೂರು, ಮಾ.8- ಸ್ವಾತಂತ್ರ್ಯ ಪೂರ್ವದಿಂದಲೂ ದೇಶಕ್ಕೆ ಮಹಿಳೆಯರ ಕೊಡುಗೆ ಅಪಾರವಾಗಿದೆ ಎಂದು ಪಟ್ಟಣ ಪಂಚಾಯ್ತಿ ಉಪಾಧ್ಯಕ್ಷೆ ನಿರ್ಮಲ ಹನುಮಂತಪ್ಪ ತಿಳಿಸಿದರು.

ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಮಹಿಳಾ ದಿನಾಚರಣೆ' ಸಮಾರಂಭದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್ ಅಂಬೇಡ್ಕರ್ ಅವರ ಸಂವಿಧಾನದ ಫಲವಾಗಿ ಮಹಿಳೆಯರು ಶಿಕ್ಷಣದ ಜೊತೆ ಸಮಾಜದ ಮುಖ್ಯವಾಹಿನಿಗೆ ಬಂದಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸರ್ವತೋಮುಖ ಅಭಿವೃದ್ದಿಗೆ ಕುಟುಂಬದಲ್ಲಿ ಪುರುಷರ ಸಹಕಾರ ಅಗತ್ಯ ಎಂದು ಹೇಳಿದರು.

ಪ.ಪಂ ಸದಸ್ಯೆ ಮಂಜಮ್ಮ ಮಾತನಾಡಿ, ಮಹಿಳೆಯರು ಸ್ವಾವಲಂಬಿಗಳಾಗಿ ಜೀವನ ಸಾಗಿಸಬೇಕು. ಪುರುಷರ ಜೊತೆಗೆ ಆರ್ಥಿಕ ಸಬಲೀಕರಣಕ್ಕೆ ಮಹಿಳೆಯರ ಶ್ರಮವೂ ಅಗತ್ಯ ಎಂದು ಅಭಿಪ್ರಾಯಿಸಿದರು.

ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಮಾತನಾಡಿ, ಮಹಿಳೆ ಆಧುನಿಕವಾಗಿ ಅಬಲೆಯಲ್ಲ, ಸಬಲೆ ಎಂಬುದನ್ನು ಸಾಬೀತು ಮಾಡಿದ್ದು, ಕೌಟುಂಬಿಕ ಒತ್ತಡದ ಮಧ್ಯೆ, ಮಕ್ಕಳ ಲಾಲನೆ, ಪಾಲನೆ ಜೊತೆಗೆ ಪ್ರತಿ ಕ್ಷೇತ್ರದಲ್ಲಿಯೂ ತನ್ನದೇ ಛಾಪು ಮೂಡಿಸಿದ್ದಾಳೆ ಎಂದು ಪ್ರಶಂಸಿಸಿದರು.

ಪಟ್ಟಣ ಪಂಚಾಯಿತಿಯಲ್ಲಿ ಸೇವೆಗೈಯ್ಯುತ್ತಿರುವ ಮಹಿಳೆಯರಿಗೆ ಸನ್ಮಾನಿಸಿ, ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ವಿಶಾಲಾಕ್ಷಿ ಓಬಳೇಶ್ ವಹಿಸಿದ್ದರು.

ಸದಸ್ಯರಾದ ಲೋಲಾಕ್ಷಮ್ಮ, ಲಲಿತ ಶಿವಣ್ಣ, ಮಹಿಳಾ ಸ್ವಸಹಾಯ ಸಂಘದ ಅಂಬುಜಾ, ಆರೋಗ್ಯ ನಿರೀಕ್ಷಕ ಖಿಫಾಯತ್, ಕಂದಾಯ ನಿರೀಕ್ಷಕ ಮೊಹಿದ್ದೀನ್, ಮುಖಂಡರಾದ ಓಬಳೇಶ್ ಮುಂತಾದವರು ಇದ್ದರು.

## ಹರಿಹರದಲ್ಲಿ ಇಂದು

ನೆಹರು ನಗರ ಕ್ಯಾಂಪ್‌ನಲ್ಲಿರುವ ಶ್ರೀ ಪಟ್ಟಾಭಿರಾಮ ಸ್ವಾಮಿಯ 36ನೇ ವರ್ಷದ ತ್ರಿಪುಷ್ಕರ ಮಹೋತ್ಸವವು ಇಂದಿನಿಂದ 3 ದಿನಗಳ ಕಾಲ ನಡೆಯಲಿದೆ. ಪ್ರತಿ ದಿನ ಮಧ್ಯಾಹ್ನ 12.30ರಿಂದ 3.30ರವರೆಗೆ ಅನ್ನ ಸಂತರ್ಪಣೆ ಇರುತ್ತದೆ.

## ವಿದ್ಯುತ್ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ

**(1ನೇ ಪುಟದಿಂದ)** ಪಡಿಸಿಕೊಳ್ಳುವ ಸಂದರ್ಭದಲ್ಲಿ ಜಮೀನು ಕಳೆದುಕೊಂಡವರಿಗೆ ಅಲ್ಲಿ ಸ್ಥಾಪನೆಯಾಗುವ ಉದ್ಯಮಗಳಲ್ಲಿ ಉದ್ಯೋಗ ಕೊಡಿಸುವ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿ ರಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಸರ್ಕಾರವೇ ನಡೆಸಲು ನಿರ್ಧರಿಸಿ, ಚಾಲನೆ ನೀಡಲಾಗಿದೆ. ಮುಂದಿನ ಹಣಕಾಸು ವರ್ಷದಲ್ಲಿ ಇನ್ನಷ್ಟು ಸಶಕ್ತಗೊಳಿಸಲಾಗುವುದು ಎಂದು ಅವರು ನುಡಿದರು.

ಕಬ್ಬಿಗೆ ಎಸ್.ಎ.ಪಿ. ನೀಡುವ ಕುರಿತಂತೆ ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿರುವ ಶ್ರೀ ವೀರ ಪುಲಿಕೇಶಿ ಸಹಕಾರಿ ಬ್ಯಾಂಕ್ ರೈತರಿಗೆ ಕಿರುಕುಳ ನೀಡುತ್ತಿರುವುದಾಗಿ ರೈತ ಮುಖಂಡರು ಮುಖ್ಯಮಂತ್ರಿಯವರ ಗಮನ ಸೆಳೆದರು. ಈ ಬ್ಯಾಂಕಿಗೆ ಕೂಡಲೇ ನೋಟಿಸು ನೀಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ರೈತ ಮುಖಂಡ ಬಡಗಲಪುರ ನಾಗೇಂದ್ರ, ಸಚಿವರಾದ ಗೋಪಾಲಯ್ಯ, ವಿ. ಸೋಮಣ್ಣ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ ಹಾಗೂ ಮತ್ತಿತರರು ಹಾಜರಿದ್ದರು.

## ತ್ವರಿತ ಜಾಮೀನು?

**(1ನೇ ಪುಟದಿಂದ)** ದಿನದಲ್ಲಿ ವಿಚಾರಣೆಗೆ ಸ್ವೀಕರಿಸುವಂತೆ ರಿಜಿಸ್ಟ್ರಿಗೆ ನಿರ್ದೇಶನ ನೀಡಬೇಕು ಎಂದು ಒಕ್ಕೂಟ ಮನವಿ ಮಾಡಿಕೊಂಡಿದೆ.

ಈ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಿರುವ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಶಾಸಕರ ವಿರುದ್ಧ ಪ್ರಕರಣ ದಾಖಲಿಸಿದಾಗ ಮರು ದಿನವೇ ವಿಚಾರಣೆಗೆ ಬರುತ್ತದೆ. ಆದರೆ, ಸಾಮಾನ್ಯ ವಕೀಲರು ಜನಸಾಮಾನ್ಯರ ಪ್ರಕರಣದಲ್ಲಿ ಜಾಮೀನಿಗೆ ಅರ್ಜಿ ದಾಖಲಿಸಿದಾಗ ವಾರಗಳು ಹಾಗೂ ತಿಂಗಳುಗಳ ಕಾಲವೇ ಕಾಯಬೇಕಾಗುತ್ತದೆ ಎಂದಿದ್ದಾರೆ.

ಸಂವಿಧಾನದಲ್ಲಿ ಎಲ್ಲರನ್ನೂ ಸಮಾನರೆಂದು ಪರಿಗಣಿಸಲಾಗಿದೆ. ಹೀಗಾಗಿ ವಿ.ಐ.ಪಿ. ಎಂದು ತಕ್ಷಣವೇ ತೀರ್ಪು ಕೊಡುವುದು ಸಮಂಜಸ ಅಲ್ಲ. ಜನ ಸಾಮಾನ್ಯರ ರೀತಿಯಲ್ಲಿ ಶಾಸಕರೂ ಕಾಯುವಂತಾಗಬೇಕು. ಇಲ್ಲವಾದರೆ ಗಣ್ಯರಂತೆ ಸಾಮಾನ್ಯರಿಗೂ ತ್ವರಿತವಾಗಿ ವಿಚಾರಣೆ ಕಲ್ಪಿಸಿ ಎಂದವರು ಹೇಳಿದ್ದಾರೆ.

ಈ ಹಿಂದೆಯೂ ಗಣ್ಯರ ಪ್ರಕರಣದಲ್ಲಿ ತ್ವರಿತ ಜಾಮೀನು ನೀಡಲಾಗಿದೆ. 90ರ ದಶಕದಲ್ಲಿ ಹಿರಿಯ ನಾಯಕ ಬಂಗಾರಪ್ಪ ಅವರು ಕಂಪ್ಯೂಟರ್ ಹಗರಣದಲ್ಲಿ ಸಿಲುಕಿದ್ದರು. ಆಗ ರಾತ್ರೋ ರಾತ್ರಿ ಕೋರ್ಟ್ ತೆಗೆದು ಜಾಮೀನು ನೀಡಲಾಗಿತ್ತು. ಆಗಲೂ ಬೆಂಗಳೂರು ವಕೀಲರ ಒಕ್ಕೂಟ ಪ್ರಶ್ನಿಸಿತ್ತು ಎಂದವರು ಹೇಳಿದ್ದಾರೆ.

## 14ನೇ ವರ್ಷದ ಪುಣ್ಯಸ್ಮರಣೆ



**ದಿ|| ಬಿ. ಗುರುದೇವ್**
(ಜಿಲ್ಲಾ ದಸ್ತಾವೇಜು ಬರಹಗಾರರು)

**ನೀವು ನಮ್ಮನ್ನಗಲಿ ಇಂದಿಗೆ (08.03.2023) ಹದಿನಾಲ್ಕು ವರ್ಷಗಳಾದವು. ನಿಮ್ಮ ಸವಿನೆನಪು ಅಚ್ಚಳಿಯದೇ ಉಳಿದಿದೆ. ನಿಮ್ಮ ಆದರ್ಶ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...**

ಧರ್ಮಪತ್ನಿ : **ಶ್ರೀಮತಿ ಲಕ್ಷ್ಮಿದೇವಿ**
ಮಕ್ಕಳು : **ಬಿ.ಜಿ. ಅರುಣ್‌ಕುಮಾರ್, ಬಿ.ಜಿ. ಯೋಗಿತ**
ಸೊಸೆ: **ಸಪ್ನ**, ಮೊಮ್ಮಗಳು : **ನೇಹಲ್**
ಹಾಗೂ **ಪಿ.ಜೆ. ತಿಪ್ಪೇಸ್ವಾಮಿ** (ದಸ್ತಾವೇಜು ಬರಹಗಾರರು)
**ಎಸ್.ಬಿ.ಶಶಿಧರ್ ಹಾಗೂ ಸಹೋದರರು, ಬಂಧು-ಮಿತ್ರರು.**

## ಸಾಹಿತಿ ಸುಕನ್ಯಾ ತ್ಯಾವಣಗಿ ಅವರಿಗೆ 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿ

**(1ನೇ ಪುಟದಿಂದ)** ಮಹಿಳಾ ಅಭಿ ವೃದ್ಧಿ ಕ್ಷೇತ್ರದಲ್ಲಿ 8 ಮಂದಿ, ಕಲಾ ಕ್ಷೇತ್ರದಲ್ಲಿ 5 ಮಂದಿ, ಕ್ರೀಡಾ ಕ್ಷೇತ್ರ ದಲ್ಲಿ ಇಬ್ಬರು, ಸಾಹಿತ್ಯ ಕ್ಷೇತ್ರದಲ್ಲಿ ಮೂವರಿಗೆ ಈ ಪ್ರಶಸ್ತಿ ನೀಡಲಾಗಿದೆ. ಪ್ರಶಸ್ತಿಯು ತಲಾ 25 ಸಾವಿರ ರೂ. ನಗದು, ಫಲಕ ಹೊಂದಿದೆ. 6 ಸಂಸ್ಥೆಗಳಿಗೆ ಪ್ರಶಸ್ತಿ ನೀಡಲಾಗಿದ್ದು, ಈ ಪ್ರಶಸ್ತಿಯು ತಲಾ 50 ಸಾವಿರ ರೂ. ನಗದು, ಫಲಕ ಹೊಂದಿದೆ.

## ಕಾಂಗ್ರೆಸ್‌ನ ಬಂದ್ ವಾಪಸ್

**(1ನೇ ಪುಟದಿಂದ)** ನಿರ್ಧರಿಸಿತ್ತು. ಆದರೆ ಪರೀಕ್ಷೆಗಳು ಇರುವ ಕಾರಣ ಬಂದ್‌ನಿಂದ ನಮಗೆ ತೊಂದರೆಯಾಗಲಿದೆ ಎಂದು ವಿದ್ಯಾರ್ಥಿಗಳು ಹಾಗೂ ಪೋಷಕರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಅವರ ಹಿತ ನಮ್ಮ ಆದ್ಯತೆ. ಹೀಗಾಗಿ ಅವರ ಅಭಿಪ್ರಾಯಕ್ಕೆ ಗೌರವ ನೀಡಿ ಬಂದ್ ಕರೆ ವಾಪಸ್ ಪಡೆಯಲು ತೀರ್ಮಾನಿಸಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.


## ಎಸ್.ಜಿ.ಪಿ.ಸಿ. ವಿಭಜನೆಗೆ ವಿರೋಧ

ಚಂಡೀಘಡ, ಮಾ. 8 – ಹರಿಯಾಣದಲ್ಲಿರುವ ಗುರುದ್ವಾರಗಳ ನಿರ್ವಹಣೆಗೆ ಪ್ರತ್ಯೇಕ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ರಚಿಸುವುದನ್ನು ವಿರೋಧಿಸುವುದಾಗಿ ಅಕಾಲ್ ತಖ್ತ್ ಜಾಕೇದಾರ್ ಗಿಯಾನಿ ಹರ್‌ಪ್ರೀತ್ ಸಿಂಗ್ ಹೇಳಿದ್ದಾರೆ. ಇದುವರೆಗೂ ದೇಶದಲ್ಲಿ ಒಂದೇ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ (ಎಸ್.ಜಿ.ಪಿ.ಸಿ.) ಇತ್ತು. ಆದರೆ, ಹರಿಯಾಣದಲ್ಲಿ ಪ್ರತ್ಯೇಕ ಎಸ್.ಜಿ.ಪಿ.ಸಿ. ಸ್ಥಾಪಿಸಲು ಕಾಯ್ದೆ ರೂಪಿಸಲಾಗಿತ್ತು. ಈ ಕಾಯ್ದೆಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ಎತ್ತಿ ಹಿಡಿದಿತ್ತು.

ಓಕುಳಿ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಅಕಾಲ್ ತಖ್ತ್ ಜಾಕೇದಾರ್, ಈ ಹಿಂದೆ ರೈತರ ಮೂರು ಕಾಯ್ದೆಗಳನ್ನು ವಾಪಸ್ ಪಡೆಯಲು ಹೋರಾಟ ನಡೆಸಿದಾಗ ಗುರುದ್ವಾರಗಳ ಲಂಗಾರ್‌ಗಳು ಬೆಂಬಲ ನೀಡಿದ್ದವು. ಹೀಗಾಗಿ ಎಸ್.ಜಿ.ಪಿ.ಸಿ. ಒಡೆಯಲು ಸರ್ಕಾರ ಮುಂದಾಗಿದೆ ಎಂದವರು ಆರೋಪಿಸಿದರು.

ಹರಿಯಾಣದ ಸಿಖ್ಖರು ಗುರುದ್ವಾರಗಳ ನಿರ್ವಹಣೆ ಪಡೆದುಕೊಂಡಿಲ್ಲ. ಇದನ್ನು ಸರ್ಕಾರ ಪಡೆದುಕೊಂಡಿದೆ. ನಾವು ಎಚ್ಚೆತ್ತುಕೊಳ್ಳದೇ ಹೋದರೆ ಎಸ್.ಜಿ.ಪಿ.ಸಿ.ಯ ನಿರ್ವಹಣೆಯನ್ನೂ ಸರ್ಕಾರ ವಹಿಸಿಕೊಳ್ಳಲಿದೆ ಎಂದವರು ಆರೋಪಿಸಿದರು.

## ಅಜ್ಜಂಪುರ ಶೆಟ್ರು ಉಮಾಪತಿ ನಿಧನ




ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ ವಾಸಿ, **ಶ್ರೀ ಅಜ್ಜಂಪುರ ಶೆಟ್ರು ಉಮಾಪತಿ** ಅವರು ದಿನಾಂಕ 8-3-2023ನೇ ಬುಧವಾರ ರಾತ್ರಿ 10 ಗಂಟೆಗೆ ಬೆಂಗಳೂರಿನಲ್ಲಿ ಲಿಂಗೈಕ್ಯರಾಗಿರುತ್ತಾರೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಮೃತರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ.

**ಉಮಾಪತಿ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ದಾವಣಗೆರೆ ಸಿಟಿ ಕೆಬಿ ಬಡಾವಣೆ, ಸಿದ್ದಮ್ಮ ಪಾರ್ಕ್ ಎದುರಿನಲ್ಲಿರುವ ಅವರ ನಿವಾಸಕ್ಕೆ ದಿನಾಂಕ 9-3-2023ರ ಗುರುವಾರ ಮಧ್ಯಾಹ್ನ 1 ಗಂಟೆಗೆ ತರಲಾಗುವುದು. ನಂತರ ಮಧ್ಯಾಹ್ನ 4 ಗಂಟೆಗೆ ಗಾಂಧಿನಗರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.**

**- ದುಃಖತಪ್ತ ಕುಟುಂಬ ವರ್ಗ,**
**ಅಜ್ಜಂಪುರ ಶೆಟ್ರು ವಂಶಸ್ಥರು**

## ಪುಣ್ಯಸ್ಮರಣೆ




**ದಿ|| ಶ್ರೀಮತಿ ಕಚವಿ ಲಕ್ಷ್ಮಮ್ಮ ನಾಗಪ್ಪ ವಿಠಲ್‌ಕರ್**

ಅಮ್ಮ ನೀವು ನಮ್ಮನ್ನಗಲಿ ಇಂದಿಗೆ 40 ವರ್ಷಗಳಾದವು. ನಿಮ್ಮಲ್ಲಿರುವ ಸಹನೆ, ತಾಳ್ಮೆ ಪ್ರೀತಿ ನಮಗೆ ದಾರಿದೀಪವಾಗಿವೆ. ನಿಮ್ಮ ಮಾರ್ಗದರ್ಶನದಂತೆಯೇ ನಡೆಯುತ್ತಿದ್ದೇವೆ. ನಿಮ್ಮ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ.

**ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು, ಕಚವಿ ಶಂಕರ್ ನಾಗಪ್ಪ ವಿಠಲ್‌ಕರ್ ಮತ್ತು ಸಹೋದರರು**

ಶ್ರೀ ಅಮೃತೇಶ್ವರಿ ಜ್ಯುಯಲರ್ಸ್, ಮಂಡಿಪೇಟೆ.
ಶ್ರೀ ವೆಂಕಟೇಶ್ವರ ಜ್ಯುಯಲರಿ ಮಾರ್ಟ್, ಚೌಕಿಪೇಟೆ.
ಶ್ರೀ ಮಾರುತಿ ಜ್ಯುಯಲರ್ಸ್,ಚೌಕಿಪೇಟೆ, ದಾವಣಗೆರೆ.

## ಎಲೆಬೇತೂರಿನ ಹನಗವಾಡಿ ಗುರುಸಿದ್ದಪ್ಪ ನಿಧನ



**ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ ಹನಗವಾಡಿ ನಾರಪ್ಪನವರ ಪುತ್ರ**
**ಹನಗವಾಡಿ ಹೆಚ್.ಎನ್ ಗುರುಸಿದ್ದಪ್ಪ**
**ಇವರು ದಿನಾಂಕ 08.03.2023ರ ಬುಧವಾರ ಸಂಜೆ 5 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.**

**ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆ ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.03.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ಎಲೆಬೇತೂರು ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.**

ದು:ಖತಪ್ತ ಕುಟುಂಬ ವರ್ಗ : **ಹನಗವಾಡಿ ವಂಶಸ್ಥರು, ಎಲೆಬೇತೂರು**
**ಮೊ : 90082 24922, 73386 04322**

## ಶಕುಂತಲಮ್ಮ ನಿಧನ



ದಾವಣಗೆರೆ ಕೆಟಿಜೆ ನಗರ 3ನೇ ಮೇನ್, 3ನೇ ಕ್ರಾಸ್ ರಮೇಶ್ ಐಸ್ ಫ್ಯಾಕ್ಟರಿ ವಾಸಿ ದಿ. ಹನುಮಂತಪ್ಪ ವೈ.ಬಿ. ಇವರ ಪತ್ನಿ ಶಕುಂತಲಮ್ಮ (64) ಅವರು ದಿನಾಂಕ 08.03.2023ರ ಬುಧವಾರ ರಾತ್ರಿ 9.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.03.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಆರ್.ಹೆಚ್ ಬೃಂದಾವನದಲ್ಲಿ ನಡೆಯಲಿದೆ.

## ಇಂಪೀರಿಯಲ್‌ನಲ್ಲಿ ವಿಜ್ಞಾನ ದಿನಾಚರಣೆ

ದಾವಣಗೆರೆ, ಮಾ.8- ನಗರದ ಇಂಪೀರಿಯಲ್ ಪಬ್ಲಿಕ್ ಶಾಲೆಯಲ್ಲಿ ಡಾ.ಸಿ.ವಿ. ರಾಮನ್ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಯಿತು. ಶಾಲಾ ಮಕ್ಕಳು ವಿವಿಧ ವಿಜ್ಞಾನ ಚಟುವಟಿಕೆ ಆಧಾರಿತ ಪರಿಕಲ್ಪನೆಗಳ ಮಾದರಿಗಳನ್ನು ತಯಾರಿಸಿದ್ದರು. ಪ್ರಾಂಶುಪಾಲ ರೋಷನ್ ಕುಮಾರ್ ವಿಜ್ಞಾನದ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು. ಅಧ್ಯಕ್ಷತೆಯನ್ನು ನಿಶಾ ಸಚಿನ್ ಚಕ್ರವರ್ತಿ ವಹಿಸಿದ್ದರು.

# ಜಗಳೂರಿನಲ್ಲಿ ನಾಳೆ 'ಪ್ರಜಾಧ್ವನಿ'



## ಕಾರ್ಯಕ್ರಮ ಯಶಸ್ವಿಗೆ ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಕರೆ

ಜಗಳೂರು, ಮಾ. 8- ಪಟ್ಟಣದಲ್ಲಿ ಮಾರ್ಚ್ 10 ರಂದು ನಡೆಯಲಿರುವ 'ಪ್ರಜಾಧ್ವನಿ' ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಲಿದ್ದು, ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮಾಜಿ ಶಾಸಕ ಎಚ್.ಪಿ.ರಾಜೇಶ್ ಕರೆ ನೀಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಎರಡು ಭಾಗಗಳಾಗಿ ವಿಂಗಡಿಸಿ, ಪ್ರಜಾಧ್ವನಿ ಜನಜಾಗೃತಿ ಕಾರ್ಯಕ್ರಮ ಅಭಿಯಾನ ನಡೆಸಲಾಗುತ್ತಿದ್ದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೇತೃತ್ವ ವಹಿಸಿದ್ದಾರೆ.

ಪ್ರಜಾಧ್ವನಿ ಕಾರ್ಯಕ್ರಮದ ಮುಖ್ಯ ಉದ್ದೇಶ ಕಾಂಗ್ರೆಸ್ ಆಡಳಿತಾವಧಿಯಲ್ಲಿನ ಜನಪರ ಯೋಜನೆಗಳನ್ನು ಹಾಗೂ ಗ್ಯಾರಂಟಿ ಯೋ ಜನೆಗಳನ್ನು ಮನೆ ಬಾಗಿಲಿಗೆ ತಲುಪಿಸುವುದು ಮತ್ತು ಬಿಜೆಪಿ ದುರಾಡಳಿತ, ಪರ್ಸಂಟೇಜ್ ರಾಜಕಾರಣವನ್ನು ಮತದಾರರಿಗೆ ಮನವರಿಕೆ ಮಾಡಿ, ಪ್ರಜೆಗಳ ಧ್ವನಿಯನ್ನು ಎತ್ತಿಹಿಡಿಯುವುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಮಾಜಿ ಸಚಿವರಾದ ಜಮೀರ್ ಅಹಮ್ಮದ್, ಎಚ್.ಆಂಜನೇಯ, ಎಸ್.ಎಸ್. ಮಲ್ಲಿಕಾರ್ಜುನ್, ಎಂ.ಬಿ.ಪಾಟೀಲ್, ಬಸವರಾಜ್ ರಾಯರೆಡ್ಡಿ ಸೇರಿದಂತೆ ಅನೇಕ ನಾಯಕರುಗಳು ಭಾಗವಹಿಸಲಿದ್ದು, ವಿಧಾನ ಸಭಾ ಕ್ಷೇತ್ರದಿಂದ ಸುಮಾರು 15ರಿಂದ 20 ಸಾವಿರ ಕಾರ್ಯಕರ್ತರು ಸೇರಲಿದ್ದಾರೆ ಎಂದು ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಕೆಪಿಸಿಸಿ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಕೆಪಿಸಿಸಿ ಎಸ್ಟಿ ಘಟಕದ ಅಧ್ಯಕ್ಷ ಕೆ.ಪಿ.ಪಾಲಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡರಾದ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ತಿಪ್ಪೇಸ್ವಾಮಿ ಗೌಡ್ರು, ಪಲ್ಲಾಗಟ್ಟೆ ಶೇಖರಪ್ಪ, ಯುಜಿ ಶಿವಕುಮಾರ್, ಬಿದರಕೆರೆ ವೀರೇಶ್, ವೆಂಕಟೇಶ್, ಗಿರೀಶ್ ಒಡೆಯರ್, ವಿಜಯ್ ಕೆಂಚೋಳ್ ಮತ್ತಿತರರಿದ್ದರು.

# ಜಿಲ್ಲೆಯಲ್ಲಿ ಬಾಲ್ಯ ವಿವಾಹ ತಡೆಯಲು ಶ್ರಮಿಸಲು ಕರೆ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ

ದಾವಣಗೆರೆ, ಮಾ. 8 – ಜಿಲ್ಲೆಯಲ್ಲಿ ಶೇ.19ರಷ್ಟು ಬಾಲ್ಯ ವಿವಾಹಗಳು ನಡೆಯುತ್ತಿರುವ ವರದಿಗಳಿವೆ. ಬಾಲ್ಯ ವಿವಾಹ ತಡೆಯಲು ನಾವೆಲ್ಲರೂ ಶ್ರಮಿಸಬೇಕಿದೆ ಎಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ಜಿಲ್ಲಾಡಳಿತ ಭವನದ ತುಂಗಭದ್ರ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಮಹಿಳೆಯರಿಗಾಗಿ ಕಾನೂನು ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೊನ್ನಾಳಿ ಭಾಗದಲ್ಲಿ ಹೆಚ್ಚಿನ ಬಾಲ್ಯ ವಿವಾಹದ ಪ್ರಕರಣಗಳು ಕಂಡು ಬರುತ್ತಿವೆ. ಇವುಗಳನ್ನು ತಡೆಯಲು ಸಾಧ್ಯ ಇದೆ. ಮುಂದಿನ ಮಹಿಳಾ ದಿನಾಚರಣೆಯ ಒಳಗೆ, ಜಿಲ್ಲೆಯಲ್ಲಿ ಬಾಲ್ಯ ವಿವಾಹ ಕಡಿಮೆ ಮಾಡಲು ಮಹಿಳೆಯರು ಪಣ ತೊಡಬೇಕಿದೆ ಎಂದರು.

ಮಹಿಳೆಯಿಂದ ಮಹಿಳೆಯ ಮೇಲೆ ಕೌಟುಂಬಿಕ ದೌರ್ಜನ್ಯ ನಡೆಯುತ್ತಿರುವ ಬಗ್ಗೆಯೂ ಆತ್ಮಾವಲೋಕನ ಬೇಕಿದೆ. ಮಹಿಳಾ ದೌರ್ಜನ್ಯದ ಪ್ರಕರಣಗಳು ನ್ಯಾಯಾಲಯಗಳಲ್ಲಿ ದಾಖಲಾದಾಗ, ಸರಿಯಾದ ಸಾಕ್ಷಿ ಹೇಳಿ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲು ನೆರವಾಗಬೇಕು ಎಂದವರು ಹೇಳಿದರು.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡಿ, ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳು ಕೇವಲ 10ನೇ ತರಗತಿ ಪೂರೈಸಲು ಆಗುತ್ತಿರಲಿಲ್ಲ. ಈಗ ಹಲವಾರು ಕ್ಷೇತ್ರಗಳಲ್ಲಿ ಅವರ ಸಾಧನೆಗಳನ್ನು ನೋಡಬಹುದು ಎಂದು ಹೇಳಿದರು.

ಮಹಿಳೆಯರು ಕಾನೂನುಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಉದ್ಯೋಗಸ್ಥ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಅನೇಕ ಕಾಯ್ದೆ ಕಾನೂನುಗಳು ಜಾರಿಯಾಗಿದ್ದು ಮಹಿಳೆಯರು ಅದನ್ನು ದುರುಪಯೋಗ ಪಡಿಸಿಕೊಳ್ಳಬಾರದು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ.ಚನ್ನಪ್ಪ ಮಾತನಾಡಿ, ಇಂದು ಮಹಿಳೆಯರು ಯಾವುದೇ ಬ್ಯಾಂಕ್‌ಗಳಿಂದ ಸಾಲವನ್ನು ಪಡೆಯದೆ ಸ್ವ-ಸಹಾಯ ಸಂಘಗಳನ್ನು ರಚಿಸಿಕೊಂಡು ಆರ್ಥಿಕವಾಗಿ ಬೆಳವಣಿಗೆ ಹೊಂದು ತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಾದ ವೀರೇಶ್‌ಕುಮಾರ್ ಮಾತನಾಡಿ, ದೇಶದಲ್ಲಿ ಮಹಿಳೆಯರ ಸುರಕ್ಷಿತ ನಗರಗಳ ಪಟ್ಟಿಗಳಲ್ಲಿ ನಮ್ಮ ನಗರವೂ ಒಂದಾಗಿದೆ. ಸ್ಮಾರ್ಟ್ ಸಿಟಿ ವತಿಯಿಂದ ರಕ್ಷಣೆಗಾಗಿ ನಗರದೆಲ್ಲೆಡೆ ಕ್ಯಾಮೆರಾ ಅಳವಡಿಕೆ ಹಾಗೂ ದೌರ್ಜನ್ಯ ನಡೆದಾಗ ಒನ್ ಸಿಟಿ ಒನ್ ಪೋರ್ಟಲ್ ಆಪ್ ಮೂಲಕ ದೂರಿದರೆ ನೆರವು ನೀಡುವ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ನಿವೇದಿತಾ ಮಾತನಾಡಿ, ಹೆಣ್ಣು ಮಕ್ಕಳನ್ನು ಬಾಲ್ಯದಿಂದಲೇ ಒಂದು ಚೌಕಟ್ಟಿಗೆ ಒಳಪಡಿಸಬಾರದು. ಹೆಣ್ಣಾ ಗಲಿ ಗಂಡಾಗಲಿ ಸಮಾಜದಲ್ಲಿ ಎಲ್ಲರನ್ನು ಸಮಾನವಾಗಿ ನೋಡಬೇಕು ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಎನ್ ಲೋಕೇಶ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಸೌಮ್ಯ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಬಿ. ಪಾಲಾಕ್ಷಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಬಸನಗೌಡ, ಮಹಿಳಾ ಸಿ.ಡಿ.ಪಿ ನಿರ್ಮಲಾ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

# 'ಕಾಮಣ್ಣ ಮಕ್ಕಳೇ.... ಎಂದು ಕೂಗುವುದರಲ್ಲೂ ಸಂದೇಶವಿದೆ'

ಕಾಮದಹನ ನೆರವೇರಿಸಿದವರು 'ಕಾಮಣ್ಣ ಮಕ್ಕಳೇ, ಕಳ್ಳ ಸೂಳೆ ಮಕ್ಕಳೇ, ಭೀಮಣ್ಣ ಮಕ್ಕಳೇ, ಬಿಟ್ಟಿ ಸೂಳೆ ಮಕ್ಕಳೇ...' ಮುಂತಾಗಿ ಕೂಗಿ ಸಂಭ್ರಮಿಸಿದರು ಎಂದು ವರದಿಯಾಗಿದೆ. ಆದರೆ, ನಮ್ಮ ಬಾಲ್ಯದಲ್ಲಿ ಕಾಮದಹನಕಾರರು ಸಾಮಾನ್ಯವಾಗಿ ಹೇಳುತ್ತಾ ಇದ್ದದ್ದು 'ಕಾಮಣ್ಣ ಮಕ್ಕಳೇ, ಕಳ್ಳ ಸುಳ್ಳ ಮಕ್ಕಳೇ, ಭೀಮಣ್ಣ ಮಕ್ಕಳೇ, ಭಿಕ್ಷೆ ಬೇಡೋ ಮಕ್ಕಳೇ, ಐದೇ ಕುಳ್ಳು, ಆರೇ ಕಟಿಗಿ, ಕೊಡತಂಕ ಬಿಡಲ್ಲೋ....' ಮುಂತಾಗಿ ಕೂಗುತ್ತಿದ್ದರು.

ಈ ಕಾಮದಹನ ಹಾಗೂ ಕೂಗುವುದು ಒಂದು ರೀತಿ ಜನಪದೀಯವಾಗಿ ಬಂದದ್ದಾಗಿದ್ದು, ಜಾನಪದರು ನಿಸ್ಸಂಕೋಚವಾಗಿ ಅಭಿವ್ಯಕ್ತಿಸುತ್ತಿದ್ದರಾದರೂ ಅಶ್ಲೀಲ ಪದಗಳನ್ನು, ಬೈಗುಳಗಳನ್ನು ಧಾರಾಳವಾಗಿ ಬಳಸುತ್ತಿರಲಿಲ್ಲ. ಜಾನಪದ ಸಾಹಿತ್ಯವು ಎಷ್ಟು ವಾಚ್ಯವೋ, ಎಷ್ಟು ಸರಳವೋ ಒಮ್ಮೊಮ್ಮೆ ಅಷ್ಟೇ ಸೂಚ್ಯವೂ ಆಗಿರುತ್ತದೆ. 'ಕಾಮಣ್ಣ ಮಕ್ಕಳೇ, ಕಳ್ಳ ಸುಳ್ಳ ಮಕ್ಕಳೇ' ಎನ್ನುವಲ್ಲಿ 'ಕಾಮ' ಎನ್ನುವುದು ದೈಹಿಕ ಸಂಬಂಧವಷ್ಟೇ ಆಗಿರದೆ 'ಬೇಕು ಬೇಕು' ಎನ್ನುವ ಹಪಾಹಪಿಯನ್ನು ಸಂಕೇತಿಸುತ್ತದೆಯಾದರೆ, ಅದನ್ನು ಪಡೆದುಕೊಳ್ಳಲು ಕಳ್ಳತನಕ್ಕೂ ಹೇಸುವುದಿಲ್ಲ, ಸುಳ್ಳು ಹೇಳಲೂ ಹೇಸುವುದಿಲ್ಲ, ಹೀಗಾಗಿ ಕಾಮಿಗಳು ಕಳ್ಳ ಸುಳ್ಳ ಮಕ್ಕಳೆಂದು ಪರಿಭಾವಿಸಿದರೆ, 'ಭೀಮಣ್ಣ ಮಕ್ಕಳೇ, ಭಿಕ್ಷೆ ಬೇಡೋ ಮಕ್ಕಳೇ' ಎನ್ನುವಲ್ಲಿ ಭೀಮ ಎಂದರೆ ಪಾಂಡವರ ಭೀಮನಲ್ಲ, 'ದೊಡ್ಡದು', 'ಮಹತ್ತು' ಎಂಬರ್ಥದಲ್ಲಿ ಬೇಕಾದಷ್ಟು ಇದ್ದಾಗಿಯೂ ದುರಾಸೆಯಿಂದ ಕೈಚಾಚುವವರನ್ನು, ಕೈ ತುಂಬಾ ಸಂಬಳಾದಿಗಳು ಬಂದರೂ ಸಹ ಲಂಚಕ್ಕೆ, ಭ್ರಷ್ಟಾಚಾರಕ್ಕೆ ಕೈ ಚಾಚುವವರನ್ನು 'ಭೀಮಣ್ಣ ಮಕ್ಕಳೇ, ಭಿಕ್ಷೆ ಬೇಡೋ ಮಕ್ಕಳೇ' ಎಂದು ಮೂದಲಿಸಿದಂತಿದೆ. 'ಐದೇ ಕುಳ್ಳು' ಎಂದರೆ 'ಕುರುಳು', 'ಸಗಣಿಯ ಬೆರಣಿ' ಇದು ಸುಡುವಂತದು, ಇಲ್ಲಿ ಐದು ಕುರುಳು ಎಂಬುವುದು ನಮ್ಮ ಪಂಚ ಜ್ಞಾನೇಂದ್ರಿಯಗಳ ಕಾಮವನ್ನು ಪ್ರತಿನಿಧಿಸುತ್ತದೆ. ಕಣ್ಣಿಗೆ ದೃಶ್ಯದ ಕಾಮ, ಕಿವಿಗೆ ಶಬ್ಧದ ಕಾಮ, ಮೂಗಿಗೆ ವಾಸನೆಯ ಕಾಮ, ನಾಲಗೆಗೆ ರುಚಿಯ ಕಾಮ ಹಾಗೂ ಚರ್ಮಕ್ಕೆ ಸ್ಪರ್ಶದ ಕಾಮ ಇವೇ ನಮ್ಮನ್ನು ಬೆಂಕಿಯಾಗಿಯೂ ಸುಡಬಹುದು. ಹಾಗೆಯೇ ಆರು ಕಟ್ಟಿಗೆ ಎಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಾದಿ ಇವೇ ನಮ್ಮನ್ನು ಕಟ್ಟಿಗೆಗಳಿಂದ ಬಡಿದಂತೆ ಬಡಿಯಬಹುದು. ಅಂತಹ ಐದು ಕುರುಳು, ಆರು ಕಟ್ಟಿಗೆ ನಮಗೆ ಕೊಡಿ, ಅದರಿಂದ ಆ ಕಾಮವನ್ನೇ ನಾವು ಸುಡುತ್ತೇವೆ ಎಂದು ಕೂಗಿ ಹೇಳುವುದು ಇದರ ತಾತ್ಪರ್ಯ ಎನ್ನಬಹುದು. ನಮ್ಮ ಬಾಲ್ಯದಲ್ಲಿ ಕಾಮಣ್ಣನ ಚಿತ್ರ ಪಟ ಅಂಟಿಸಿದ ಕೋಲು, ಹಣ ಹಾಕಿಸಿ ಕೊಳ್ಳುವ ಡಬ್ಬ ಹಿಡಿದು ಹಣ ಕೇಳಲು ಬರುತ್ತಿದ್ದ ಮಕ್ಕಳು ತಮ್ಮ ಆ ಕೂಗಿ ನಲ್ಲಿ 'ಎಂಟಣೆ ರೊಕ್ಕ ಡಬ್ಬದಾಗಿಕ್ಕು, ಒಂದ್ ರೂಪಾಯಿ ರೊಕ್ಕ ಜೇಬಾಗಿಕ್ಕು' ಎಂದೂ ಕೂಗುತ್ತಿದ್ದರು. ಇದು ಹಣದ ಕಾಮವು ಸಣ್ಣ ಮೊತ್ತವನ್ನು ಮಾತ್ರ ಲೆಕ್ಕಕ್ಕೆ ತೋರಿಸಿ, ದೊಡ್ಡ ಮೊತ್ತವನ್ನು ಗುಳುಂ ಮಾಡುವ ಪರಿಪಾಠದ ವಿಡಂಬನೆಯೂ ಆಗಿತ್ತು

**- ಎಚ್.ಬಿ.ಮಂಜುನಾಥ್, ಹಿರಿಯ ಪತ್ರಕರ್ತ**

# ಅಣಜಿಯಲ್ಲಿ ನಾಡಿದ್ದು ಕೆರೆ ಹೊನ್ನಮ್ಮ ದೇವಿಯ ದೊಡ್ಡ ಜಾತ್ರೆ



ದಾವಣಗೆರೆ, ಮಾ.8- ತಾಲ್ಲೂಕಿನ ಅಣಜಿ ಗ್ರಾಮದಲ್ಲಿ ಇದೇ ದಿನಾಂಕ 11 ರಿಂದ 13 ರವರೆಗೆ ಶ್ರೀ ಕೆರೆ ಹೊನ್ನಮ್ಮ ದೇವಿಯ ದೊಡ್ಡಜಾತ್ರೆ ಹಾಗೂ ಭಾರೀ ಜಂಗೀ ಕುಸ್ತಿಗಳು ನಡೆಯಲಿವೆ.

ದಿನಾಂಕ 11 ರಂದು ಬೆಳಿಗ್ಗೆ 8 ಗಂಟೆಯಿಂದ ಗ್ರಾಮದಲ್ಲಿ ಅಮ್ಮನವರ ದೇವಸ್ಥಾನದಿಂದ ಕೇಲುಗಳನ್ನು ನಡೆ ಮುಡಿಯಿಂದ ಉತ್ಸವ ಮತ್ತು ಭಾಜಾ ಭಜಂತ್ರಿಯಿಂದ ಕೆರೆಗೆ ಕರೆದೊಯ್ಯಲಾಗುವುದು.

ನಂತರ ಮಧ್ಯಾಹ್ನ 2.30 ಕ್ಕೆ ದೇವಸ್ಥಾನದ ಆವರಣದಲ್ಲಿ ಭಾರೀ ಜಂಗೀ ಕುಸ್ತಿಗಳ ಉದ್ಘಾಟನಾ ಸಮಾರಂಭ ನಡೆಯಲಿದೆ.

ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಪ್ರೊ. ಎನ್. ಲಿಂಗಣ್ಣ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಜಿಲ್ಲಾ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಣಜಿ ಗ್ರಾ.ಪಂ. ಅಧ್ಯಕ್ಷೆ ಪುಷ್ಪ ದೇವೇಂದ್ರಪ್ಪ, ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಶ್ರೀ ಕೆರೆ ಹೊನ್ನಮ್ಮ ವಿದ್ಯಾಸಂಸ್ಥೆ ಕಾರ್ಯದರ್ಶಿ ಪಿ.ಎನ್. ಪ್ರಕಾಶ್ ಪಟೇಲ್ ಭಾಗವಹಿಸಲಿದ್ದಾರೆ.

ದಿನಾಂಕ 12 ರಂದು ಅಮ್ಮನವರಿಗೆ ಅಭಿಷೇಕ, ಪೂಜೆ, ಭಕ್ತಾದಿಗಳಿಂದ ಹಣ್ಣು-ಕಾಯಿ, ಎಡೆ ಸಮರ್ಪಣೆ, ಬೆಳಿಗ್ಗೆ 10 ರಿಂದ 12.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 6.30 ರವರೆಗೆ ಭಾರೀ ಜಂಗೀ ಕುಸ್ತಿಗಳು ನಡೆಯಲಿವೆ.

ರಾತ್ರಿ 9.30 ರಿಂದ ಶ್ರೀ ದಿಗಂಬರೇಶ್ವರ ಸಂಗೀತ ನಾಟಕ ಮಂಡಳಿ ಅಣಜಿ ಇವರಿಂದ 'ಶ್ರೀ ಶಿವಶರಣೆ ಕೆರೆ ಹೊನ್ನಮ್ಮ' ಐತಿಹಾಸಿಕ ನಾಟಕ ಪ್ರದರ್ಶನ ಇರುತ್ತದೆ.

ಮಾ. 13 ರಂದು ಮೂರನೇ ದಿನದ ಕಾರ್ಯಕ್ರಮಗಳು ಜರುಗಲಿದ್ದು, ಬೆಳಿಗ್ಗೆ 10 ಗಂಟೆಯಿಂದ 12.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ 6.30 ರವರೆಗೆ ಭಾರೀ ಜಂಗೀ ಕುಸ್ತಿಗಳು ನಡೆಯಲಿವೆ.

ಮಧ್ಯಾಹ್ನ 3 ಗಂಟೆಗೆ ಕುಸ್ತಿಗಳ ಸಮಾರೋಪ ಸಮಾರಂಭ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅಧ್ಯಕ್ಷತೆ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ ಬಹುಮಾನ ವಿತರಣೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಮೇಯರ್ ವಿನಾಯಕ ಪೈಲ್ವಾನ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ. ಶೇಖರಪ್ಪ, ಕೋಶಾಧ್ಯಕ್ಷಷ ಕೆ. ಗುಡ್ಡೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

# ಗುಣಮಟ್ಟದ ಶಿಕ್ಷಣಕ್ಕೆ ಪೋಷಕರು, ಶಿಕ್ಷಕರ ನಡುವೆ ಸಾಮರಸ್ಯ ಅಗತ್ಯ



**ಹರಪನಹಳ್ಳಿ**

ಹರಪನಹಳ್ಳಿ, ಮಾ. 8- ಗುಣಮಟ್ಟದ ಶಿಕ್ಷಣ ಹೆಚ್ಚಿಸಲು ಪೋಷಕರು ಮತ್ತು ಶಿಕ್ಷಕರ ನಡುವೆ ಸಾಮರಸ್ಯ ಅಗತ್ಯ ಎಂದು ಕನ್ನನಾಯಕನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಎ.ಸಿ.ಮಂಜಪ್ಪ ಹೇಳಿದರು.

ತಾಲ್ಲೂಕಿನ ಕನ್ನನಾಯಕನಹಳ್ಳಿ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳ ಶಾಲಾ ವಾರ್ಷಿಕೋತ್ಸವ ಮತ್ತು ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರ ವಸತಿಯುತ ಮಕ್ಕಳಿಗೆ ಅನೇಕ ಉಪಯೋಗಕಾರಿ ಸೌಲಭ್ಯಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಂಡು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು .

ಮಕ್ಕಳಲ್ಲಿರುವ ವಿವಿಧ ಪ್ರತಿಭೆಗಳನ್ನು ಹೊರ ತಂದು ಅವುಗಳಿಗೆ ಸರಿಯಾದ ಕಾಯಕಲ್ಪ ನೀಡಲು ನಾವು ಬದ್ಧರಾಗಿದ್ದು, ಅವುಗಳನ್ನು ಮಕ್ಕಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

2008ರಲ್ಲಿ ಸ್ಥಾಪನೆಯಾದ ಈ ವಸತಿ ಶಾಲೆಯು 2012ರಲ್ಲಿ ಸ್ವಂತ ಕಟ್ಟಡದೊಂದಿಗೆ ಕನ್ನನಾಯಕನಹಳ್ಳಿಗೆ ವರ್ಗಾವಣೆಗೊಂಡು ಆರಂಭವಾಯಿತು. ಪ್ರಸ್ತುತ ಶಾಲೆಯಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಪ್ರತಿ ವರ್ಷವೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮವಾದ ಫಲಿತಾಂಶ ಬಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಪೋಷಕ, ಪತ್ರಕರ್ತ ಸುರೇಶ್ ಮಂಡಕ್ಕಿ ಮಾತನಾಡಿ, ಈ ವಸತಿ ಶಾಲೆಗಳು ಅನೇಕ ಬಡ ವಿದ್ಯಾರ್ಥಿಗಳ ಪಾಲಿಗೆ ವರದಾನವಾಗಿದ್ದು, ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಇಂತಹ ವಸತಿ ಶಾಲೆಗಳು ಆಸರೆಯಾಗಿವೆ ಎಂದರು.

# ಉಕ್ಕಡಗಾತ್ರಿಯಲ್ಲಿ ಇಂದು ಕಸಾಪ ಸಭೆ

ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಹರಿಹರ ತಾಲ್ಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಇಂದು ಸಂಜೆ 4 ಗಂಟೆಗೆ ಉಕ್ಕಡಗಾತ್ರಿಯಲ್ಲಿ ಸ್ಥಳೀಯರ ಹಾಗೂ ಹರಿಹರ ತಾಲ್ಲೂಕಿನ ಸಾಹಿತ್ಯಾಸಕ್ತರ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ತಿಳಿಸಿದ್ದಾರೆ.

# ಶ್ರೀ ಮಾಯಮ್ಮ ರಥೋತ್ಸವ : 3 ಲಕ್ಷಕ್ಕೆ ಹರಾಜಾದ ದೇವಿ ಪಟಾಕ್ಷಿ



ಕೊಟ್ಟೂರು, ಮಾ. 8 - ತಾಲ್ಲೂಕಿನ ಗಾಣಗಟ್ಟೆ ಗ್ರಾಮದ ಆದಿಶಕ್ತಿ ಶ್ರೀ ಮಾಯಮ್ಮ ದೇವಿ ರಥೋತ್ಸವವು ಸಕಲ ವಾದ್ಯ ಮೇಳಗಳೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮ ಸಡಗರದಿಂದ ಬುಧವಾರ ಸಂಜೆ ಅದ್ದೂರಿಯಾಗಿ ಜರುಗಿತು. ರಥೋತ್ಸವಕ್ಕೂ ಮೊದಲು ಶ್ರೀ ಮಾಯಮ್ಮ ದೇವಿಗೆ ಬೇವಿನ ಎಲೆಯ ಜೊತೆಗೆ ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಿ, ವಿಶೇಷ ಪೂಜೆ ಸಲ್ಲಿಸಿ ದೇವಸ್ಥಾನವನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿದ ನಂತರ ಶ್ರೀ ದೇವಿಯ ಪಟಾಕ್ಷಿ ಹರಾಜು ಪ್ರಕ್ರಿಯೆ ನಡೆಯಿತು.

ಕೊಟ್ಟೂರು ತಾಲ್ಲೂಕು ಗಾಣಗಟ್ಟೆ ಗ್ರಾಮದ ತಳವಾರ ಓಬಳೇಶ್ ಅವರು 3,10,101 ಲಕ್ಷ ರೂಪಾಯಿಗೆ 2023 ರ ಈ ವರ್ಷದ ಮಾಯಮ್ಮ ದೇವಿಯ ಪಟಾಕ್ಷಿಯನ್ನು ಪಡೆದುಕೊಂಡರು.

ನಂತರ ರಥೋತ್ಸವಕ್ಕೆ ಚಾಲನೆ ದೊರಕಿತು. ತೇರು ಏರುವ ಸಮಯದಲ್ಲಿ ನೆರೆದಿದ್ದ ಸಹಸ್ರಾರು ಭಕ್ತರು ಜಯಘೋಷ ಕೂಗುತ್ತಿದ್ದಂತೆ ಆಯಗಾರ ಬಳಗದ ಭಕ್ತರಿಂದ ತೇರನ್ನು ಕೈಯಿಂದ ತಳ್ಳುವ ಮೂಲಕ ಚಾಲನೆಗೊಂಡಿತು.

ಶ್ರೀದೇವಿಯ ಭಕ್ತರು ಬಾಳೆಹಣ್ಣು, ಹೂವು, ದವನವನ್ನು ರಥಕ್ಕೆ ಎಸೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು.

# ರಂಗಿನಲಿ ಮಿಂದೆದ್ದ ರಾಣೇಬೆನ್ನೂರು




ರಾಣೇಬೆನ್ನೂರು, ಮಾ. 8- ಪ್ರತಿ ವರ್ಷ ತಮ್ಮ ಮಕ್ಕಳು ಮರಿಗಳೊಂದಿಗೆ ಮನೆ ಮುಂದೆಯೇ ಬಣ್ಣ ಎರಚಿಕೊಂಡು ಸಂಭ್ರಮದಲ್ಲಿ ಮಿಂದೇಳುತ್ತಿದ್ದ ಅನೇಕ ಯುವತಿಯರು ಈ ಬಾರಿ ನಗರದಾದ್ಯಂತ ಸಂಚರಿಸಿದ್ದು ಕಂಡು ಬಂದಿತು.

ಕಂಕುಳಲ್ಲಿ ಮಕ್ಕಳನ್ನೆತ್ತಿಕೊಂಡು ಕುಣಿದು ಕುಪ್ಪಳಿಸಿದ ನೋಟ ಬಹಳಷ್ಟು ಆಕರ್ಷಣೀಯವಾಗಿತ್ತು. ಬೆಳಿಗ್ಗೆ 7 ಗಂಟೆಗೆ ಗಲ್ಲಿ ಗಲ್ಲಿಗಳಲ್ಲಿ ಪೋರ-ಪೋರಿಯರ ಎರಚಾಟ ಪ್ರಾರಂಭಗೊಂಡಿದ್ದು, ಬಿಸಿಲೇರಿದಂತೆ ನಗರದಾದ್ಯಂತ ಪಸರಿಸಿತು.

ಅಲ್ಲಲ್ಲಿ ಕಾಂಗ್ರೆಸ್ ನ ಪ್ರಕಾಶ ಕೋಳಿವಾಡ, ಜೆಡಿಎಸ್ ನ ಮಂಜುನಾಥ ಗೌಡ ಶಿವಣ್ಣನವರ, ನವಯುಗದ ಸಂತೋಷ ಪಾಟೀಲ, ನಗರಸಭೆಯ ಅನೇಕ ಸದಸ್ಯರು, ಕೃಷಿ ಪದವೀಧರ ಸಂಘದವರು, ವರ್ತಕರು, ನೇಕಾರರು, ಯುವಕರ ಪಡೆ ಹೀಗೆ ಎಲ್ಲರೂ ತಮ್ಮ ತಮ್ಮ ಸಮಭಾವದ, ಸಮಚಿತ್ತದವರೊಂದಿಗೆ ಸಂಚರಿಸಿದ ಸಂಭ್ರಮ 12 ಗಂಟೆಗೆ ಕಾಮಣ್ಣನಿಗೆ ಅಗ್ನಿ ಸ್ಪರ್ಶ ಮಾಡುವುದರೊಂದಿಗೆ ಮಧ್ಯಾಹ್ನ ಎರಡು ಗಂಟೆಗೆ ಕೊನೆಗೊಂಡಿತು.

# ನಾ ಕಂಡಂತೆ 'ವಿಕ್ಕಿ'...



**'ಜೀವನವು ನಾವೆಲ್ಲರೂ ಹಂಚಿಕೊಳ್ಳುವ ಸಂಗಾತಿಯಾಗಿದೆ**
**ಗಾಳಿಯಲ್ಲಿ ಆಮ್ಲಜನಕದಂತೆಯೇ**
**ನಾವು ಅದನ್ನು ಹೇಗೆ ಬದುಕುತ್ತೇವೆ ಎಂಬುದು ನಮಗೆ ಬಿಟ್ಟದ್ದು**
**ಋಣಾತ್ಮಕ ಅಥವಾ ಪ್ಲಸ್ ನೊಂದಿಗೆ'.**

ಕವಿಗಳ ಈ ವಾಣಿಯಂತೆ ಬದುಕುತ್ತಿರುವ ಜೀವವಿದು. ಮಾತು ಮಿತ...ಕೇಳಲು ಹಿತ. ಬಯಸುತ್ತಾರೆ ಜನ ಹಿತ. ಇವರು ನಿತ್ಯ ಪ್ರಕಟಿಸುವ ವಾಣಿಯು ನಮ್ಮ ಪ್ರಾಂತ್ಯದಲ್ಲಿ ಜನಜನಿತ. ಇಂದು ಐವತ್ತನೆಯ ಜನುಮ ದಿನವನ್ನು ಆಚರಿಸುತ್ತಿರುವ ವಿಕಾಸ್ ಮೆಳ್ಳೇಕಟ್ಟೆ ತಂದೆ ಹೆಚ್. ಎನ್. ಷಡಾಕ್ಷರಪ್ಪನವರು ಸ್ಥಾಪಿಸಿದ 'ಜನತಾವಾಣಿ' ಪತ್ರಿಕೆಯ ಸೂತ್ರಧಾರ. ಒಳ್ಳೆಯ ಹಾಸ್ಯ ಪ್ರಜ್ಞೆಯಿದೆ, ತುಸು ತುಂಟತನವಿದೆ ಇವೆಲ್ಲವನ್ನೂ ಮೀರಿಸುವ ಪ್ರಬುದ್ಧತೆಯಿದೆ. ಸಾಮಾಜಿಕ ಕಳಕಳಿಯಿದೆ. ಬಟ್ಟೆ-ಬಣ್ಣ, ಆಟ-ಊಟ, ಸಂಗೀತ-ಸಾಹಿತ್ಯ, ಸಾಂಸ್ಕೃತಿಕ ಸದಭಿರುಚಿಗಳಿವೆ. ಆಗಾಗ್ಗೆ ಪ್ರಬುದ್ಧ-ಪ್ರಖರ ಲೇಖನಗಳನ್ನು ಬರೆದಿದ್ದರೂ ಪತ್ರಿಕೆಯ ಸಮಗ್ರ ನಿರ್ವಹಣೆಯ ಕಡೆಗೆ ಹೆಚ್ಚು ಗಮನ. ಎಮೋಷನಲ್ ಆಗಿದ್ದರೂ ಯೋಚನೆಗಳು ಪ್ರಾಕ್ಟಿಕಲ್. ತಿರುಪತಿ ವೆಂಕಟೇಶನ ಭಕ್ತನಾದರೂ ಅಲ್ಲಮ ಪ್ರಭು, ಮರುಳ ಸಿದ್ಧರು, ಓಶೋ, ಜೆನ್ ಸಂತರ ಕುರಿತು ಸ್ಪಿರಿಚ್ಯುಯಲ್.

ಆನೆ ಜನತಾವಾಣಿಯ ಲಾಂಛನ. ಅದರಂತೆಯೇ ವಿಕಾಸ್ ನಡಿಗೆ. ದೈತ್ಯ ಬುದ್ದಿವಂತಿಕೆ ಇರುವ ಈ ವ್ಯಕ್ತಿ ಏನೇ ಹೆಜ್ಜೆ ಇಡುವ ಮುನ್ನ ಉಪಯೋಗಿಸುತ್ತಾರೆ ಯುಕ್ತಿ. ತಾಳ್ಮೆಯೇ ಈತನ ಶಕ್ತಿ. ಸುತ್ತಮುತ್ತಲಿನ ಬೊಗುಳುವಿಕೆಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಮುನ್ನ ಸಹಚರರೊಂದಿಗೆ ಸಮಾಲೋಚಿಸುತ್ತಾರೆ ಸೂಕ್ತವೆನಿಸಿದ್ದನ್ನು ಆಯ್ದುಕೊಳ್ಳುತ್ತಾರೆ. ಜವಾಬ್ದಾರಿಯ ಜಾಣ್ಮೆಯಿದೆ. 2009ರಲ್ಲಿ ದಾವಣಗೆರೆಯಲ್ಲಿ ನಡೆದ ತರಳಬಾಳು ಹುಣ್ಣಿಮೆಯ ಸ್ಮರಣ ಸಂಚಿಕೆಯ ಸಂಪಾದಕರಾಗಿ ಅದನ್ನು ಮೌಲ್ಯಯುತವಾಗಿ ರೂಪಿಸಿದ್ದರು. ಸಿದ್ಧೇಶ್ವರ ಶ್ರೀಗಳ ಪ್ರವಚನ ಕಾರ್ಯಕ್ರಮದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ, ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದಾರೆ.

ನನ್ನಂತವರಲ್ಲಿ ಹಲವು ಪ್ರಭಾವಗಳನ್ನು ಬೀರಿರುವ ನೆಚ್ಚಿನ ಗೆಳೆಯ 'ವಿಕ್ಕಿ' ನಿಮಗೆ ಹುಟ್ಟುಹಬ್ಬದ ಶುಭಾಷಯಗಳು.

Stay Blessed

**- ಅರುಣ್ ಕುಮಾರ್ ಆರ್.ಟಿ**

# ಮಲೇಬೆನ್ನೂರಿನಲ್ಲಿ ಸಂಭ್ರಮದ ಹೋಳಿ



ಮಲೇಬೆನ್ನೂರು, ಮಾ. 8 - ಪಟ್ಟಣದಲ್ಲಿ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಇಲ್ಲಿನ ಮುಖ್ಯ ವೃತ್ತದಲ್ಲಿ ಜಮಾಯಿಸಿದ್ದ ನೂರಾರು ಯುವಕರು ಪರಸ್ಪರ ಬಣ್ಣ ಎರಚಿ ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದರು.

ನಂತರ ಬಣ್ಣದ ನೀರಿನಿಂದ ಕೂಡಿದ್ದ ಮಡಿಕೆ ಒಡೆದು ಸಂಭ್ರಮಿಸಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಡಿ. ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಪುರಸಭೆ ಸದಸ್ಯರಾದ ಬೆಣ್ಣೆ ಹಳ್ಳಿ ಸಿದ್ದೇಶ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಹಿಂದೂ ಮಹಾಗಣಪತಿಯ ವೈ. ಚಂದ್ರಶೇಖರ್, ಸಾಮೂಹಿಕ ಹೋಳಿಯ ಸಂಘಟಕರಾದ ಶ್ರೀನಿವಾಸ್, ಆಕಾಶ್, ಕಿರಣ್ ಸಂಜು, ಸುನೀಲ್, ಪಿಂಟು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಪಿ.ಎಸ್.ಐ. ಪ್ರಭು ಕೆಳಗಿನ ಮನೆ ಅವರ ನೇತೃತ್ವದಲ್ಲಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

**ಮನೆಗಳಲ್ಲಿ ಹೋಳಿ :-** ಪಟ್ಟಣದ ಅನೇಕ ಕಡೆಗಳಲ್ಲಿ ಆಯಾ ಬಡಾವಣೆಯ ಜನರು ಸೇರಿ ಹೋಳಿ ಹಬ್ಬ ಆಚರಿಸಿದರೆ, ಇನ್ನೂ ಕೆಲವರು ಮನೆಯಲ್ಲೇ ಎಲ್ಲರೂ ಸೇರಿ ಪರಸ್ಪರ ಬಣ್ಣ ಹಚ್ಚಿ ಖುಷಿ ಪಟ್ಟರು.

# ನಿರಾಶ್ರಿತರಿಗೆ ವನಿತಾ ಸಮಾಜದಿಂದ ಅರ್ಜಿ ಆಹ್ವಾನ

ದಾವಣಗೆರೆ, ಮಾ.8- ವನಿತಾ ಸಮಾಜದ ಅಂಗ ಸಂಸ್ಥೆಯಾದ 'ಆಶ್ರಯ' ಹಿರಿಯ ವನಿತೆಯರ ಆನಂದಧಾಮವು ನಿರಾಶ್ರಿತ ಮಹಿಳೆಯರು, ವಿಧವೆಯರು, ಅವಿವಾಹಿತರು, ಮಕ್ಕಳಿಲ್ಲದವರು, ಮಕ್ಕಳು ಇದ್ದು ಅವರನ್ನು ನೋಡಿಕೊಳ್ಳದವರು ಹಾಗೂ ಅನಾಥರು, ಅಬಲೆಯರಿಗೆ ಆಸರೆ ನೀಡುತ್ತಾ ಬಂದಿದೆ.

ಈ ಆನಂದಧಾಮದಲ್ಲಿ ಕೆಲವೇ ಸ್ಥಾನಗಳು ತೆರವಾಗಿವೆ. ಆಸಕ್ತ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ. 60 ವರ್ಷ ಮೇಲ್ಪಟ್ಟವರಾಗಿರಬೇಕು. ತಕ್ಕಮಟ್ಟಿಗೆ ಆರೋಗ್ಯವಾಗಿದ್ದು, ತಮ್ಮ ಕೆಲಸ ತಾವೇ ಮಾಡಿಕೊಳ್ಳಲು ಶಕ್ತರಾಗಿರಬೇಕು. ವಿವರಕ್ಕೆ ಸಂಪರ್ಕಿಸಿ: : 94806 87273, 98448 50414, 98451 66724

# ಬಡ ಮಕ್ಕಳಿಗೆ ಪ್ರಸಾದ ವ್ಯವಸ್ಥೆ

ದಾವಣಗೆರೆ,ಮಾ. 4- ನಗರದ ವನಿತಾ ಸಮಾಜದಿಂದ ಮಾರುತಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ 50ಕ್ಕೂ ಹೆಚ್ಚು ಮಕ್ಕಳಿಗೆ ಅನೇಕ ಸೇವಾ ಸಂಸ್ಥೆಗಳು ಉಚಿತವಾಗಿ ಪೆನ್ನು, ಪುಸ್ತಕ, ಬ್ಯಾಗ್ ನೀಡಿ ಪ್ರೋತ್ಸಾಹಿಸಿವೆ. ಅಲ್ಲದೇ ಪ್ರಸಾದದ ವ್ಯವಸ್ಥೆ ಮಾಡಿದ್ದವು. ಬಹುತೇಕ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಇವರೆಲ್ಲರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದ ವನಿತಾ ಸಮಾಜದ ಪದಾಧಿಕಾರಿಗಳಿಗೆ ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ, ಪ್ರಾಚಾರ್ಯರಾದ ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ, ಉಪ ಪ್ರಾಚಾರ್ಯರಾದ ರುಕ್ಕಾಬಾಯಿ ಕೊಂತಿಕಲ್ ಅಭಿನಂದಿಸಿದ್ದಾರೆ.


## ಪ್ರಕಟಣೆ

**ದಾವಣಗೆರೆ ಷುಗರ್ ಕಂಪನಿ ಲಿ.,**
**ಕುಕ್ಕುವಾಡ-577 525, ದಾವಣಗೆರೆ ತಾಲ್ಲೂಕು, ಜಿಲ್ಲೆ.**
**ಶೇರುದಾರರ ಗಮನಕ್ಕೆ**

ನಮ್ಮ ಕಂಪನಿಯ ಸಮಸ್ತ ಎಲ್ಲಾ ರೈತ ಶೇರುದಾರರಿಗೆ, ತಿಳಿಸುವುದೇನೆಂದರೆ ಎಲ್ಲಾ ಶೇರುದಾರರು ದಿ. : 03.11.2021ರ SEBI ನೋಟಿಫಿಕೇಶನ್ ಪ್ರಕಾರ, ತಮ್ಮ ಶೇರುಗಳನ್ನು Demat ರೂಪಾಂತರ ಮಾಡಿಸಬೇಕಾಗಿರುತ್ತದೆ. ಇದು ತಾ॥ 31.03.2023ರ ಒಳಗೆ ಮಾಡಿಸಬೇಕಾಗಿದೆ. ಆದುದರಿಂದ ಸಮಸ್ತ ಎಲ್ಲ ಶೇರುದಾರರು, ಆಧಾರ್ ಕಾರ್ಡ್, ಪಾನ್‌ಕಾರ್ಡ್, ಬ್ಯಾಂಕ್ ಪಾಸ್ ಬುಕ್‌ಗಳನ್ನು ತೆಗೆದುಕೊಂಡು ಕುಕ್ಕುವಾಡದಲ್ಲಿರುವ ಕಂಪನಿಯ ಶೇರು ವಿಭಾಗದ ಆಫೀಸಿನಲ್ಲಿ ಸಂಪರ್ಕಿಸಬೇಕಾಗಿ ಕೇಳಿಕೊಳ್ಳುತ್ತೇವೆ.

**ನಿಧಿ ವಾಸ್ವಾನಿ, ಕಂಪನಿ ಕಾರ್ಯದರ್ಶಿ**

# ಮೂತ್ರ ಪಿಂಡ ಅಪಾಯದಲ್ಲಿದ್ದರೆ ದೇಹದಿಂದ ಕೆಲ ಸೂಚನೆಗಳು

ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವ ಉದ್ದೇಶದಿಂದ 'ನಮ್ಮ ನಡೆ ಆರೋಗ್ಯದೆಡೆ' ಎಂಬ ಧ್ಯೇಯದಿಂದ ಶಾಮನೂರು ಶಿವಶಂಕರಪ್ಪನವರಿಂದ 2021 ರಲ್ಲಿ ಸ್ಥಾಪಿತಗೊಂಡ ಎಸ್.ಎಸ್. ಕೇರ್ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದ್ದು, ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್‌ರವರು ತಮ್ಮ ಕನಸಿನ ಕೂಸಾದ ಎಸ್.ಎಸ್. ಕೇರ್ ಟ್ರಸ್ಟ್ ಮೂಲಕ ಆರಂಭಿಕ ಹಂತದಲ್ಲಿ ರೋಗಗಳನ್ನು ಪತ್ತೆ ಮಾಡುವ ಹಾಗೂ ಆರೋಗ್ಯದ ಬಗ್ಗೆ ಕಾಳಜಿವುಳ್ಳ ಸಮಾಜ ನಿರ್ಮಾಣ ಮಾಡುವ ದೂರದೃಷ್ಟಿಯಿಂದ ಸಮಾಜದ ವಿವಿಧ ವರ್ಗದ ಜನತೆಗೆ ಉಚಿತ ಸೇವೆಯನ್ನು ನೀಡುತ್ತಿದ್ದಾರೆ.

**ಕಿಡ್ನಿಗೆ ಅಪಾಯವಿದೆ ಎಂದು ಸೂಚಿಸುವ ಲಕ್ಷಣಗಳಿವು:**

ಮೂತ್ರಪಿಂಡವು ದೇಹದ ಅತ್ಯಂತ ಸೂಕ್ಷ್ಮವಾದ ಅಂಗ, ಹೆಚ್ಚಿನವರು ಈ ಅಂಗದ ಬಗ್ಗೆ ಹೆಚ್ಚು ಕಾಳಜಿ ವಹಿಸುವುದಿಲ್ಲ. ಆದರೆ ನಮ್ಮನ್ನು ಆರೋಗ್ಯವಂತರಾಗಿಡುವ ಅನೇಕ ಕಾರ್ಯಗಳನ್ನು ಕಿಡ್ನಿ ಮಾಡುತ್ತದೆ. ಇದರ ಆರೈಕೆಗೆ ಒತ್ತು ನೀಡದಿದ್ದರೆ ಹಲವು ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

ಇತ್ತೀಚಿನ ಜೀವನಶೈಲಿಯಿಂದ ಮೂತ್ರಪಿಂಡದ ಕಾಯಿಲೆಗೆ ಒಳಗಾಗುವ ಸಾಧ್ಯತೆ ಜಾಸ್ತಿಯಾಗುತ್ತಿದೆ. ನಿಮಗೊಂದು ತಿಳಿದಿರಲಿ ನಮ್ಮ ಮೂತ್ರಪಿಂಡ ಅಪಾಯದ ಸ್ಥಿತಿಯಲ್ಲಿದೆ ಎಂದರೆ ನಮ್ಮ ದೇಹವು ಕೆಲವೊಂದು ಸೂಚನೆಗಳನ್ನು ನೀಡುತ್ತದೆ. ಈ ಬಗ್ಗೆ ಗಮನ ವಹಿಸಿದರೆ ಸಮಸ್ಯೆ ನಿವಾರಣೆಯಾಗುತ್ತದೆ. ಇದು ನಮಗೆ ತಿಳಿಯದಿದ್ದರೆ ಮುಂದಿನ ದಿನಗಳಲ್ಲಿ ಅನಾಹುತಕ್ಕೆ ಇದು ಕಾರಣವಾಗುತ್ತದೆ.

ಜೀವನ ಶೈಲಿಯಿಂದ ಕಂಡುಬರುವ ಮಧುಮೇಹ, ಸ್ಥೂಲಕಾಯತೆ ಮತ್ತು ರಕ್ತದೊತ್ತಡದ ಸಮಸ್ಯೆಗಳಿಂದ ಮೂತ್ರಪಿಂಡದ ಕಾಯಿಲೆಗೆ ಒಳಗಾಗುವ ಸಾಧ್ಯತೆಯಿರುತ್ತದೆ. ಜೀವನ ಶೈಲಿ, ಆಹಾರ ಕ್ರಮಗಳು ಇಂತಹ ಅಪಾಯವನ್ನು ಹೆಚ್ಚಿಸುತ್ತದೆ. ಈ ಕೆಳಗೆ ನಮೂದಿಸಿರುವ ಕಾಯಿಲೆಗಳು ಕಿಡ್ನಿಯ ಡ್ಯಾಮೇಜ್‌ಗೆ ಕಾರಣವಾಗಿವೆ. ಇವುಗಳಿಂದ ಕಿಡ್ನಿಯ ಸಮಸ್ಯೆಗಳು ಕಾಡಬಹುದು.

1. **ಮಧುಮೇಹ**
2. **ಅಧಿಕ ರಕ್ತದೊತ್ತಡ**
3. **ಹೃದಯ ಸಂಬಂಧಿ ಕಾಯಿಲೆ**
4. **ತೀವ್ರ ತರದ ಧೂಮಪಾನ**
5. **ಸ್ಥೂಲಕಾಯತೆ**
6. **ಕೌಟುಂಬಿಕ ಹಿನ್ನೆಲೆಯಿಂದ**
7. **ಅಸಹಜ ಮೂತ್ರಪಿಂಡ ರಚನೆ**

ನಮ್ಮ ಕಿಡ್ನಿ ಅಥವಾ ಮೂತ್ರಪಿಂಡ ಅಪಾಯದಲ್ಲಿದೆ ಎಂದು ಕೆಲವೊಂದು ದೇಹದಲ್ಲಿನ ಆರೋಗ್ಯದ ಏರುಪೇರಿನಲ್ಲಿ ನಮಗೆ ತಿಳಿಯುತ್ತದೆ. ಆದರೆ ಈ ಬಗ್ಗೆ ನಮಗೆ ಅರಿವಿಲ್ಲದಿದ್ದರೆ ಅಪಾಯ ಹೆಚ್ಚುತ್ತಲೇ ಹೋಗುತ್ತದೆ. ಕಿಡ್ನಿಯ ತೀವ್ರ ಸಮಸ್ಯೆಗೂ ಇದು ಕಾರಣವಾಗುತ್ತದೆ. ಎಷ್ಟರಮಟ್ಟಿಗೆ ಅಂದರೆ ಕಿಡ್ನಿ ನಿಷ್ಕ್ರಿಯವಾಗೋದು, ಅದರ ಕೆಲಸವನ್ನು ಅದು ಸರಿಯಾಗಿ ಮಾಡದೇ ಇರುವಂತಹ ಸಮಸ್ಯೆ ಉಂಟಾಗುತ್ತದೆ. ಹಾಗಾದರೆ ಯಾವೆಲ್ಲ ಲಕ್ಷಣಗಳು ನಮಗೆ ಕಾಣುತ್ತವೆ. ಇಲ್ಲಿದೆ ಈ ಬಗ್ಗೆ ಸಂಪೂರ್ಣ ಮಾಹಿತಿ.




**ನಿರಂತರ ಮೂತ್ರ ವಿಸರ್ಜನೆ**

ಸಾಮಾನ್ಯಕ್ಕಿಂತ ಹೆಚ್ಚು ನಿರಂತರವಾಗಿ ಮೂತ್ರ ಮಾಡುವುದು ಮೂತ್ರಪಿಂಡದ ಸಮಸ್ಯೆ ಮೊದಲ ಹಾಗೂ ಸಾಮಾನ್ಯ ಲಕ್ಷಣವಾಗಿದೆ. ಈ ರೀತಿ ಇದ್ದರೆ ನಿಮಗೆ ಮೂತ್ರಪಿಂಡದ ಸಮಸ್ಯೆ ಇದೆ ಎಂದರ್ಥವಾಗಿದೆ. ನಿಮ್ಮ ಮೂತ್ರದ ಬಣ್ಣವು ನಿಮ್ಮ ಮೂತ್ರಪಿಂಡದ ಬಗ್ಗೆ ಹೇಳುತ್ತದೆ. ಮೂತ್ರವನ್ನು ಮಾಡುವಾಗ ನಿಮಗೆ ಏನಾದರೂ ಕೆಂಪು ಬಣ್ಣ ಹಳದಿ ಬಣ್ಣ ಹಾಗೂ ಅರಿಶಿನ ಬಣ್ಣದ ಬರುತ್ತಿದ್ದರೆ ನಿಮ್ಮ ಮೂತ್ರಪಿಂಡದಲ್ಲಿ ತೊಂದರೆ ಇದೆ ಎಂದು ಅರ್ಥ. ಅಲ್ಲದೇ ನಿಮಗೆ ಮೂತ್ರ ಮಾಡುವಾಗ ನಿರಂತರವಾಗಿ ನೋವು ಇದ್ದರೆ ಅದು ಕೂಡ ಮೂತ್ರಪಿಂಡ ಸಮಸ್ಯೆಯ ಲಕ್ಷಣವಾಗಿದೆ.

## ವಿಶ್ವ ಮೂತ್ರಪಿಂಡ ದಿನಾಚರಣೆ

**- ಊತ ಉಂಟಾಗುವುದು**

ನಮ್ಮ ದೇಹದಲ್ಲಿರುವ ಮೂತ್ರಪಿಂಡಗಳ ಮುಖ್ಯ ಕೆಲಸವೆಂದರೆ ದೇಹದಿಂದ ವಿಷ ಮತ್ತು ಕಲ್ಮಶಗಳನ್ನು ಹೊರಹಾಕುವುದಾಗಿದೆ. ಎಲ್ಲಾದರೂ ಕಿಡ್ನಿಯು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ, ಈ ವಿಷಗಳು ದೇಹದೊಳಗೆ ಸಂಗ್ರಹವಾಗುತ್ತವೆ. ಇದು ದೇಹದ ಹಲವಾರು ಅಂಗಾಂಶಗಳಲ್ಲಿ ವಿಷ. ಹೆಚ್ಚುವರಿ ನೀರು ಮತ್ತು ಉಪ್ಪನ್ನು ನಿರ್ಮಿಸಲು ಕಾರಣವಾಗುತ್ತದೆ. ಇದರಿಂದಾಗಿ ಕಾಲುಗಳು, ಕೈಗಳು, ಮುಖ ಮತ್ತು ಪಾದಗಳಲ್ಲಿ ಊತ ಉಂಟಾಗುತ್ತದೆ. ಇದಲ್ಲದೇ ಮೊಣಕಾಲು ನೋವು ಹಾಗೂ ಸೊಂಟದ ಭಾಗದಲ್ಲಿ ಅಂದರೆ ಮೂತ್ರಪಿಂಡ ಇರುವಂತಹ ಜಾಗದಲ್ಲಿ ಹೆಚ್ಚಾಗಿ ನೋವು ಕಂಡು ಬರುತ್ತದೆ.

**- ಹಸಿವೆ ಆಗದೇ ಇರುವುದು**

ನೀವು ಈ ಹಿಂದೆ ತುಂಬಾ ಹಸಿಯುತ್ತಿದ್ದರೆ ಅಥವಾ ಸರಿಯಾಗಿ ಊಟ ಮಾಡುತ್ತಿದ್ದೀರಿ ಅಂದುಕೊಳ್ಳಿ ಆದರೆ ಈಗ ಹಸಿವು ಆಗುವುದಿಲ್ಲ ಎಂದಾದರೆ ಇದರ್ಥ ನಿಮ್ಮ ಕಿಡ್ನಿ ಅಪಾಯದಲ್ಲಿದೆ ಎಂಬುವುದಾಗಿದೆ.

**- ಮೂತ್ರದಲ್ಲಿ ರಕ್ತ**

ನಿಮ್ಮ ಮೂತ್ರದಲ್ಲಿ ಯಾವುದೇ ಕೆಲವು ಕಲೆಗಳು ಅಥವಾ ನಿಮ್ಮ ಮೂತ್ರದಲ್ಲಿ ರಕ್ತ ಹೆಪ್ಪುಗಟ್ಟಿರುವ ಅನುಭವ ನಿಮಗಾದರೆ ನೀವು ತಕ್ಷಣ ವೈದ್ಯರನ್ನು ಸಂಪರ್ಕಿಸಲು ಮರೆಯದಿರಿ. ನಿಮ್ಮ ಮೂತ್ರದ ಬಣ್ಣದಲ್ಲಿ ಹಠಾತ್ ಬದಲಾವಣೆಯಾದರೆ ಅದು ರಕ್ತಮಿಶ್ರಿತ ಮೂತ್ರವಾಗಿರುತ್ತದೆ. ಇದು ಮೂತ್ರಪಿಂಡ ಸಮಸ್ಯೆಯ ನಿರ್ಣಾಯಕ ಸಂಕೇತವಾಗಿದೆ. ಈ ಸ್ಥಿತಿಯನ್ನು ಹೆಮಟುರಿಯಾ ಎಂದು ಕರೆಯಲಾಗುತ್ತದೆ.

**- ವಿಪರೀತ ಆಯಾಸ!**

ಯಾವುದೇ ಕೆಲಸವನ್ನು ಮಾಡಿದರೂ ಕೂಡ ಹೆಚ್ಚಿಗೆ ಆಯಾಸ ಆಗುತ್ತಿರುವ ಅನುಭವ ನಿಮಗಾದರೆ ಇದು ಕೂಡ ಕಿಡ್ನಿ ಸಮಸ್ಯೆಯ ಲಕ್ಷಣವಾಗಿದೆ. ಹೌದು, ಮೂತ್ರಪಿಂಡ ಸಮಸ್ಯೆ ಇದ್ದರೆ ಕೆಂಪು ರಕ್ತ ಕಣಗಳ ಉತ್ಪಾದನೆಯ ಇಳಿಕೆಗೆ ಕಾರಣವಾಗುತ್ತದೆ. ಅಲ್ಲದೆ ಇದು ರಕ್ತಹೀನತೆಗೆ ಕಾರಣವಾಗುತ್ತದೆ. ಕೆಂಪು ರಕ್ತ ಕಣಗಳಲ್ಲಿನ ಈ ಇಳಿಕೆ ದೇಹದಾದ್ಯಂತ ಆಮ್ಲಜನಕ ಮತ್ತು ಪೋಷಕಾಂಶಗಳ ಪೂರೈಕೆಯಲ್ಲಿ ನೇರವಾಗಿ ಪರಿಣಾಮ ಬೀರುತ್ತದೆ. ಇದು ಸೆಲ್ಯುಲಾರ್ ಚಯಾಪಚಯ ಕ್ರಿಯೆಯ ವೈಫಲ್ಯಕ್ಕೆ ಕಾರಣವಾಗುತ್ತದೆ.

ಮೂತ್ರಪಿಂಡದ ಆರೋಗ್ಯದಲ್ಲಿನ ಹಠಾತ್ ಬದಲಾವಣೆಯು ತೀವ್ರ ಆಯಾಸ, ವಾಕರಿಕೆಗೆ ಕಾರಣವಾಗುತ್ತದೆ. ಮೂತ್ರದಲ್ಲಿ ಕಲ್ಲುಗಳ ರಚನೆ, ಮೂತ್ರದ ಬಣ್ಣದಲ್ಲಿನ ಬದಲಾವಣೆಯು ದೀರ್ಘ ಕಾಲದ ಮೂತ್ರಪಿಂಡದ ಸಮಸ್ಯೆಯ ಒಂದು ಸಾಮಾನ್ಯ ಲಕ್ಷಣವಾಗಿದೆ. ಆದಾಗ, ನೀವು ಅಥವಾ ನಿಮ್ಮ ಕುಟುಂಬವು ಮೂತ್ರಪಿಂಡದ ಕಲ್ಲು ಸಮಸ್ಯೆ ಅಥವಾ ಸ್ಥೂಲಕಾಯತೆಯ ಇತಿಹಾಸವನ್ನು ಹೊಂದಿದ್ದರೆ, ನಿಮ್ಮ ಮೂತ್ರಪಿಂಡಗಳು ಅಪಾಯದಲ್ಲಿರುತ್ತದೆ. ಹೀಗಾಗಿ, ಮೂತ್ರಪಿಂಡದ ಸಂಬಂಧ ಪರೀಕ್ಷೆ ನಡೆಸುವುದು ಉತ್ತಮ.

ಈ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ವಿಶ್ವ ಮೂತ್ರಪಿಂಡ ದಿನಾಚರಣೆಯ ಅಂಗವಾಗಿ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ದಾವಣಗೆರೆ ನಗರದ ಬಾಪೂಜಿ ಮತ್ತು ಎಸ್.ಎಸ್.ಆಸ್ಪತ್ರೆಗಳಲ್ಲಿ ಮಾರ್ಚ್ 9 ರಂದು ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದ್ದು, ಈ ಶಿಬಿರದಲ್ಲಿ ರಕ್ತದಲ್ಲಿನ ಸಕ್ಕರೆಯ ಪರೀಕ್ಷೆ, ರಕ್ತದೊತ್ತಡ ತಪಾಸಣೆ, ಮೂತ್ರ ಪರೀಕ್ಷೆ ಹಾಗೂ ಮೂತ್ರಪಿಂಡದ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ದಾವಣಗೆರೆಯ ನಾಗರಿಕರು ಈ ಸೇವೆಗಳನ್ನು ಬಳಸಿಕೊಂಡು ಮೂತ್ರಪಿಂಡ ರೋಗವನ್ನು ಆರಂಭಿಕ ಹಂತದಲ್ಲಿ ಪತ್ತೆ ಮಾಡುವ ಉದ್ದೇಶಕ್ಕೆ ಕೈ ಜೋಡಿಸಿ ದಾವಣಗೆರೆ ನಗರವನ್ನು ಆರೋಗ್ಯ ಕಾಳಜಿಯುಳ್ಳ ನಗರವನ್ನಾಗಿ ಮಾಡುವ ಎಸ್.ಎಸ್.ಕೇರ್ ಟ್ರಸ್ಟ್‌ನ ಪ್ರಯತ್ನವನ್ನು ಯಶಸ್ವಿಗೊಳಿಸೋಣ.

**-ಡಾ|| ರಾಜೀವ್ ಅಗರವಾಲ್**
ಮೂತ್ರ ಪಿಂಡ ವಿಭಾಗದ ಮುಖ್ಯಸ್ಥರು
ಜೆ.ಜೆ.ಎಂ.ವೈದ್ಯಕೀಯ ಮಹಾವಿದ್ಯಾಲಯ
ದಾವಣಗೆರೆ.

# ಹರಿಹರದಲ್ಲಿ ಸಂಭ್ರಮದ ಹೋಳಿ ಸಂಭ್ರಮ



ಹರಿಹರ, ಮಾ. 8 - ನಗರದಲ್ಲಿ ಹೋಳಿ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ನಿನ್ನೆ ತಡ ರಾತ್ರಿ ರತಿದೇವಿ ಕಾಮನಿಗೆ ವಿಶೇಷ ಪೂಜೆ, ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿವಿಧ ಬಗೆಯ ಪೂಜಾ ಕಾರ್ಯಗಳನ್ನು ಮಾಡಿ ಕುಳ್ಳು,ಕಟ್ಟಿಗೆಯಿಂದ ಕಾಮನ ದಹನ ಮಾಡಲಾಯಿತು.

ಬೆಳಗ್ಗೆ 8 ಗಂಟೆಯಿಂದ ಆರಂಭವಾದ ಓಕುಳಿ ಆಟದಲ್ಲಿ ಯುವಕರು, ಯುವತಿಯರು, ವೃದ್ಧರು ತೊಡಗಿಸಿಕೊಂಡು ವಿವಿಧ ಬಣ್ಣಗಳನ್ನು ಎರಚಿ ಸಂಭ್ರಮಿಸಿದರು.

ನಗರದ ಹರಿಹರೇಶ್ವರ ದೇವಸ್ಥಾನ ಮುಂಭಾಗದಲ್ಲಿ, ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ, ಬಸವೇಶ್ವರ ವೃತ್ತದಲ್ಲಿ, ನಡವಲಪೇಟೆ, ಹೊಸಭರಂಪುರ, ಹರ್ಲಾಪುರ, ವಿದ್ಯಾನಗರ, ವಿಜಯ ನಗರ, ದೇವಸ್ಥಾನ ರಸ್ತೆ, ಹೈಸ್ಕೂಲ್ ಬಡಾವಣೆ, ಇಂದ್ರಾನಗರ, ಕೇಶವನಗರ, ತುಂಗಭದ್ರಾ ಬಡಾವಣೆ ಸೇರಿದಂತೆ ನಗರದ ವಿವಿಧ ಬಡಾವಣೆಗಳ ಪ್ರಮುಖ ವೃತ್ತದಲ್ಲಿ ಡಿಜೆ ಸೌಂಡ್ ಸಿಸ್ಟಮ್ ಹಾಕಿಕೊಂಡು ಯುವಕರು, ಯುವತಿಯರು ಹಾಡಿನ ತಾಳಕ್ಕೆ ಹೆಜ್ಜೆಗಳನ್ನು ಹಾಕುತ್ತಾ ಕುಣಿದು ಕುಪ್ಪಳಿಸಿ ನಾ ಮುಂದೆ ತಾ ಮುಂದೆ ಎಂದು ಮಡಿಕೆಯನ್ನು ಒಡೆಯಲು ಪೈಪೋಟಿ ಮಾಡಿದ್ದು ನೋಡುಗರ ಕಣ್ಮನ ಸೆಳೆದವು.

ನಗರದ ನಡವಲಪೇಟೆ ಯುವಕ ಸಂಘದ ವತಿಯಿಂದ 61 ನೇ ಕಾಮಣ್ಣ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಮಾಡಿದ್ದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರಸಭೆ ಸದಸ್ಯರಾದ ವಿಜಯಕುಮಾರ್, ವಿರುಪಾಕ್ಷಪ್ಪ, ಅಶ್ವಿನಿ, ಶಂಕರ್ ಖಟಾವ್ಕರ್, ಹಿಂದೂ ಜಾಗರಣ ವೇದಿಕೆಯ ದಿನೇಶ್, ಬಸವನಗೌಡ ಮತ್ತಿತರರು ಉಪಸ್ಥಿತರಿದ್ದರು.

# ಕಲಾಕುಂಚದಿಂದ 'ದಾವಣಗೆರೆ ಗೃಹಿಣಿ' ಸ್ಪರ್ಧೆ

ದಾವಣಗೆರೆ, ಮಾ.8- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದಿಂದ ಹಮ್ಮಿಕೊಳ್ಳ ಲಾದ 'ದಾವಣಗೆರೆ ಗೃಹಿಣಿ ಸ್ಪರ್ಧೆ-2023' ಹೆಸರು ನೋಂ ದಾಯಿಸುವ ಕೊನೆಯ ದಿನಾಂಕವನ್ನು ಇದೇ ದಿನಾಂಕ 15ರವರೆಗೆ ವಿಸ್ತರಿಸಲಾಗಿದೆ ಎಂದು ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್‌ಶಣೈ ತಿಳಿಸಿದ್ದಾರೆ. ವಿವರಕ್ಕೆ 953873 2777, 9743 897578, 83174 27179, 9844691391ಕ್ಕೆ ಸಂಪ ರ್ಕಿಸುವಂತೆ ಸಂಸ್ಥೆಯ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.

# ಕ್ಯಾನ್ಸರ್‌ಗೂ ಕೊರೊನಾ ಮಾದರಿಯ ಎಂ.ಆರ್.ಎನ್.ಎ. ಲಸಿಕೆ

ನವದೆಹಲಿ, ಮಾ.8 - ಕ್ಯಾನ್ಸರ್ ತಡೆಗಾಗಿ ಲಸಿಕೆಗಳನ್ನು ರೂಪಿಸುವಲ್ಲಿ ಬೆಳವಣಿಗೆಯಾದ ಸುದ್ದಿಗಳು ವೈಜ್ಞಾನಿಕ ವಲಯದಲ್ಲಿ ಪ್ರತಿನಿತ್ಯ ಎಂಬಂತಾಗಿದೆ. ಆದರೆ, ಇತ್ತೀಚಿನ ಬೆಳವಣಿಗೆ ಎಂದರೆ, ಕೊರೊನಾ ಲಸಿಕೆ ಮಾದರಿಯಲ್ಲಿ ಕ್ಯಾನ್ಸರ್‌ಗೂ ಲಸಿಕೆ ಕಂಡು ಹಿಡಿಯುವಲ್ಲಿ ಮುನ್ನಡೆಯಾಗುತ್ತಿದೆ.

ಕೊರೊನಾ ವಿರುದ್ಧ ಎಂ.ಆರ್.ಎನ್.ಎ. (ಮೆಸೆಂಜರ್ ರೈಬೊನ್ಯೂಕ್ಲಿಕ್ ಆಸಿಡ್) ಲಸಿಕೆಯನ್ನು ಇತ್ತೀಚೆಗೆ ಕಂಡು ಹಿಡಿಯಲಾಗಿತ್ತು. ಆದರೆ, ಇದಕ್ಕೆ ದಶಕಗಳ ಮೊದಲೇ ಕ್ಯಾನ್ಸರ್ ವಿರುದ್ಧ ಎ.ಆರ್.ಎನ್.ಎ. ಲಸಿಕೆಗಳ ಕುರಿತ ಸಂಶೋಧನೆ ನಡೆಯುತ್ತಾ ಬಂದಿದೆ.

ಅಂದ ಹಾಗೆ, ಕ್ಯಾನ್ಸರ್ ಲಸಿಕೆಗಳನ್ನು ಕೊರೊನಾ ಲಸಿಕೆಯ ರೀತಿ ಸಾರ್ವತ್ರಿಕವಾಗಿ ಎಲ್ಲರಿಗೂ ನೀಡುವುದಿಲ್ಲ. ಕ್ಯಾನ್ಸರ್ ಬಂದಿರುವವರಿಗೆ ನಿರ್ದಿಷ್ಟವಾಗಿ ಪ್ರತ್ಯೇಕ ಲಸಿಕೆ ರೂಪಿಸಿ ನೀಡಲಾಗುತ್ತದೆ ಎಂದು ಆಸ್ಟ್ರೇಲಿಯಾದ ಮೆಲ್ಬೋರ್ನ್ ವಿಶ್ವವಿದ್ಯಾನಿಲಯದ ಶಾಂತನ ದುಶ್ಯಂತನ್ ಹೇಳಿದ್ದಾರೆ.

**ಇದು ಹೇಗೆ :** ಸಾಂಪ್ರದಾಯಿಕವಾಗಿ ಲಸಿಕೆ ನೀಡುವಾಗ ವೈರಸ್ ಅಥವಾ ಬೇರೆ ಯಾವುದೇ ರೋಗಕಾರಕವನ್ನು ದುರ್ಬಲಗೊಳಿಸಿ ಅದನ್ನು ಚುಚ್ಚುಮದ್ದಾಗಿ ನೀಡಲಾಗುತ್ತದೆ. ಇದು ರೋಗ ನಿರೋಧಕತೆಗೆ ಕಾರಣವಾಗುತ್ತದೆ.

ಎಂ.ಆರ್.ಎನ್.ಎ. ಲಸಿಕೆಯಲ್ಲಿ ಜೀನ್‌ಗಳ ಸಂಕೇತಗಳನ್ನಷ್ಟೇ ಚುಚ್ಚುಮದ್ದಾಗಿ ನೀಡಲಾಗುತ್ತದೆ. ಇದು ಕ್ಯಾನ್ಸರ್ ವಿರುದ್ಧ ಹೋರಾಡುವ ರೋಗ ನಿರೋಧಕ ಶಕ್ತಿಗೆ ತರಬೇತಿ ನೀಡುತ್ತದೆ.

ಕೊರೊನಾದ ಎಂ.ಆರ್.ಎನ್.ಎ. ಲಸಿಕೆಗಳು ಒಂದು ರೀತಿಯ ಆಂಟಿಜೆನ್ ಗುರಿಯಾಗಿಟ್ಟುಕೊಂಡಿದ್ದವು. ಕ್ಯಾನ್ಸರ್ ಲಸಿಕೆಗಳಲ್ಲಿ ಹಲವು ರೀತಿಯ ಆಂಟಿಜೆನ್‌ಗಳನ್ನು ಗುರಿಯಾಗಿಟ್ಟುಕೊಳ್ಳಬೇಕಾಗುತ್ತದೆ.

ಪ್ರತಿ ರೋಗಿಯಲ್ಲಿಯೂ ಕ್ಯಾನ್ಸರ್ ಗಡ್ಡೆಗಳು ವಿಭಿನ್ನವಾಗಿರುತ್ತವೆ. ಬಹುತೇಕ ಪ್ರಯೋಗಗಳಲ್ಲಿ ಇಂತಹ ನಿರ್ದಿಷ್ಟ ಕ್ಯಾನ್ಸರ್‌ಗೆ ಪ್ರತ್ಯೇಕವಾಗಿ ಲಸಿಕೆಗಳನ್ನು ಉತ್ಪಾದಿಸಲಾಗುತ್ತದೆ. ಈ ಲಸಿಕೆ ಉತ್ಪಾದಿಸಲು ಸಾಮಾನ್ಯವಾಗಿ ಎರಡು ತಿಂಗಳ ಸಮಯ ಬೇಕಾಗುತ್ತದೆ.

**ತಯಾರಿಕೆ ಹೇಗೆ :** ರೋಗಿಯ ಕ್ಯಾನ್ಸರ್ ಗಡ್ಡೆಯ ಮಾದರಿ ಹಾಗೂ ಆರೋಗ್ಯವಂತ ಅಂಗಾಂಶಗಳ ಮಾದರಿ ಪಡೆದು



ಲಸಿಕೆಗಳನ್ನು ಉತ್ಪಾದಿಸಲಾಗುತ್ತದೆ. ಕ್ಯಾನ್ಸರ್‌ಕಾರಕ ಕಣಗಳು ಹಾಗೂ ಆರೋಗ್ಯವಂತ ಕಣಗಳ ಡಿ.ಎನ್.ಎ. ಮಾದರಿಗಳನ್ನು ಹೋಲಿಕೆ ಮಾಡಲಾಗುತ್ತದೆ.

ಯಾವ ಮ್ಯುಟೇಷನ್ ಕಾರಣದಿಂದ ರೋಗ ಉಲ್ಬಣಿಸುತ್ತಿದೆ ಎಂಬುದನ್ನು ವಿಜ್ಞಾನಿಗಳು ಗುರುತಿಸುತ್ತಾರೆ. ನಂತರ ಮ್ಯುಟೇಷನ್ ತಡೆಯುವ ಎಂ.ಆರ್.ಎನ್.ಎ. ಲಸಿಕೆ ಉತ್ಪಾದಿಸಲಾಗುತ್ತದೆ.

ಇದರಿಂದಾಗಿ ಹಲವಾರು ರೀತಿಯ ಕ್ಯಾನ್ಸರ್ ಆಂಟಿಜೆನ್‌ಗಳನ್ನು ಎದುರಿಸಲು ವಿಜ್ಞಾನಿಗಳಿಗೆ ಸಾಧ್ಯವಾಗುತ್ತದೆ. ಇದರಿಂದಾಗಿ ಕ್ಯಾನ್ಸರ್ ಕಣಗಳು ಮತ್ತಷ್ಟು ಬದಲಾಗಿ ದೇಹಕ್ಕೆ ಹಾನಿ ಮಾಡುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಆದರೆ, ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಔಷಧಿಗಳನ್ನು ಉತ್ಪಾದಿಸುವುದು ದುಬಾರಿ ವಿಷಯವಾಗಿದೆ.

ಆದರೆ, ವಂಶವಾಹಿ ಸರಣಿ ರೂಪಿಸುವ ತಂತ್ರಜ್ಞಾನದ ವೆಚ್ಚ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇದರ ಜೊತೆಗೆ, ಇಂತಹ ಔಷಧಿಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿದಷ್ಟೂ, ಮುಂದಿನ ದಿನಗಳಲ್ಲಿ ಬೆಲೆ ಕಡಿಮೆಯಾಗುತ್ತದೆ.

**ಎಲ್ಲಿಯವರೆಗೆ ಪ್ರಗತಿ :** 2022ರ ಡಿಸೆಂಬರ್‌ನಲ್ಲಿ ಮೊಡೆರ್ನಾ ಹಾಗೂ ಮರ್ಕ್ ಕಂಪನಿಗಳು, ಮೆಲನೊಮಾ ಉಲ್ಬಣಿತ ರೋಗಿಗಳ ಮೇಲೆ ಪ್ರಯೋಗ ಫಲಿತಾಂಶಗಳನ್ನು ಪ್ರಕಟಿಸಿದ್ದವು. ಎಂ.ಆರ್.ಎನ್.ಎ. ಲಸಿಕೆ ಹಾಗೂ ರೋಗ ನಿರೋಧಕತೆ ತರುವ ಚಿಕಿತ್ಸೆಗಳನ್ನು ಇವರಿಗೆ ನೀಡಲಾಗಿತ್ತು.

157 ರೋಗಿಗಳಿಗೆ ಒಂದು ವರ್ಷ ಚಿಕಿತ್ಸೆ ನೀಡಲಾಗಿತ್ತು. ಇವರಲ್ಲಿ ಕ್ಯಾನ್ಸರ್ ಮರುಕಳಿಸುವ ಹಾಗೂ ಸಾವಿನ ಅಪಾಯ ಶೇ.44ರಷ್ಟು ಕಡಿಮೆಯಾಗಿತ್ತು.

ಈಗ ಮೊಡೆರ್ನಾ ಹಾಗೂ ಮರ್ಕ್ ಕಂಪನಿಗಳು ಮೂರನೇ ಹಂತದ ಪ್ರಯೋಗ ನಡೆಸಲು ಮುಂದಾಗಿವೆ. ಮೂರನೇ ಹಂತದಲ್ಲಿ ಹೆಚ್ಚಿನ ಸಂಖ್ಯೆಯ ರೋಗಿಗಳ ಮೇಲೆ ಸುರಕ್ಷತೆ ಹಾಗೂ ಔಷಧ ಪರಿಣಾಮಕಾರಿಯಾಗುವ ಪ್ರಯೋಗ ನಡೆಸಲಾಗುವುದು.

ಬಯಾನ್‌ಟೆಕ್ ಕಂಪನಿ ಸಹ ಹಲವಾರು ಎಂ.ಆರ್.ಎನ್.ಎ. ಕ್ಯಾನ್ಸರ್ ಲಸಿಕೆಗಳ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ವರ್ಷದಲ್ಲಿ ಕಂಪನಿಯು ಮೆಲನೊಮಾ ರೋಗಿಗಳ ಮೇಲೆ ನಡೆಸಿದ ಎರಡನೇ ಹಂತದ ಪ್ರಯೋಗಗಳ ಫಲಿತಾಂಶ ಪ್ರಕಟಿಸಲಿದೆ.

ಇನ್ನೂ ಹಲವಾರು ಲಸಿಕೆಗಳು ಮೊದಲ ಪ್ರಯೋಗದ ಹಂತದಲ್ಲಿವೆ. ಅಡ್ಡಪರಿಣಾಮಗಳ ಕುರಿತು ಪರೀಕ್ಷೆ ನಡೆಸಲಾಗುತ್ತಿದೆ.

**ಯಾವಾಗ ಲಭ್ಯ :** ಮೊಡೆರ್ನಾ ಹಾಗೂ ಮರ್ಕ್ ಕಂಪನಿಗಳ ಕ್ಯಾನ್ಸರ್ ಲಸಿಕೆಗಳನ್ನು ತ್ವರಿತವಾಗಿ ಉತ್ಪಾದಿಸಲು ಅಮೆರಿಕದ ಔಷಧ ನಿಯಂತ್ರಕರು ಒಪ್ಪಿಗೆ ನೀಡಿದ್ದಾರೆ.

ಬ್ರಿಟನ್‌ನ ರಾಷ್ಟ್ರೀಯ ಆರೋಗ್ಯ ಸಂಸ್ಥೆಯು ಬಯಾನ್‌ಟೆಕ್ ಕಂಪನಿ ಜೊತೆಗೂಡಿ ತ್ವರಿತವಾಗಿ ಎಂ.ಆರ್.ಎನ್.ಎ. ಕ್ಯಾನ್ಸರ್ ಲಸಿಕೆಗಳನ್ನು ಉತ್ಪಾದಿಸಲು ಮುಂದಾಗಿದೆ. ಮುಂದಿನ ಏಳು ವರ್ಷಗಳಲ್ಲಿ ಲಸಿಕೆ ಉತ್ಪಾದಿಸುವ ಗುರಿ ಇದೆ.

2023ರ ಅಂತ್ಯದಿಂದಲೇ ಪ್ರಾಯೋಗಿಕವಾಗಿ ರೋಗಿಗಳಿಗೆ ಲಸಿಕೆ ನೀಡಲಾಗುವುದು. 2030ರ ವೇಳೆಗೆ 10 ಸಾವಿರ ಕ್ಯಾನ್ಸರ್ ರೋಗಿಗಳಿಗೆ ಎಂ.ಆರ್.ಎನ್.ಎ. ಲಸಿಕೆ ಒದಗಿಸಲು ಬ್ರಿಟನ್ ಉದ್ದೇಶಿಸಿದೆ.

**ಮತ್ತೆ ಯಾವುದಕ್ಕೆ :** ಕ್ಯಾನ್ಸರ್ ಅಷ್ಟೇ ಅಲ್ಲದೇ, ಎಂ.ಆರ್.ಎನ್.ಎ. ತಂತ್ರಜ್ಞಾನವು ಹಲವಾರು ವಂಶವಾಹಿ ರೋಗಗಳ ಚಿಕಿತ್ಸೆಗೆ ಉಪಯುಕ್ತವಾಗಿದೆ.

ಕೊರೊನಾದ ಹಲವಾರು ರೂಪಾಂತರಿಗಳು, ಋತುಮಾನದ ಜ್ವರ, ಮಲೇರಿಯ, ಹೆಚ್.ಐ.ವಿ. ಹಾಗೂ ಅಲರ್ಜಿಗಳಿಗೂ ಸಹ ಎಂ.ಆರ್.ಎನ್.ಎ. ಮೂಲಕ ಚಿಕಿತ್ಸೆ ನೀಡುವ ಪ್ರಯತ್ನಗಳು ನಡೆದಿವೆ.

# ಮಾಡಾಳ್ ತಳಿ ಅಡಿಕೆ !

**(1ನೇ ಪುಟದಿಂದ)** ಮೆರವಣಿಗೆ ಮಾಡಿದ್ದಾರೆ. ಭ್ರಷ್ಟರಿಗೆ ಜೈಕಾರ ಹಾಕುವುದೇ ಬಿಜೆಪಿ ಹೇಳುವ ದೇಶ ಪ್ರೇಮ. ನಿಮ್ಮ ನಾಚಿಕೆಯಿಲ್ಲದ ನಡೆಯನ್ನು ರಾಜ್ಯದ ಜನತೆ ಗಮನಿಸುತ್ತಿದ್ದಾರೆ ಎಂದು ಜೆಡಿಎಸ್ ಟ್ವೀಟ್‌ನಲ್ಲಿ ತಿಳಿಸಲಾಗಿದೆ.

ನಾಪತ್ತೆಯಾಗಿದ್ದ ಶಾಸಕ ಜಾಮೀನು ಸಿಗುತ್ತಿದ್ದಂತೆ ಪ್ರತ್ಯಕ್ಷರಾಗಿದ್ದಾರೆ. ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ನಾಪತ್ತೆಯಾದ ಶಾಸಕರು ಎಲ್ಲಿದ್ದರು ಎಂಬುದು ಗೊತ್ತಿರಲಿಲ್ಲವೇ? ಜನರಿಗೆ ಎಷ್ಟು ಮಂಕುಬೂದಿ ಎರಚಬಲ್ಲಿರಿ? ಈ ಬಾರಿ ನಿಮ್ಮೆಲ್ಲರನ್ನೂ ಮನೆಯಲ್ಲಿ ಕೂರುವಂತೆ ಜನತೆ ಮಾಡಲಿದ್ದಾರೆ ಎಂದು ಹೇಳಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರು ಪದೇ ಪದೇ ರಾಜ್ಯಕ್ಕೆ ಬರುತ್ತಿರುವುದು ಮಾಡಾಳು ವಿರೂಪಾಕ್ಷ ಅವರ ಮನೆಯಲ್ಲಿ ಸಿಕ್ಕ ಹಣಕ್ಕಾಗಿ ಎಂದು ಜನರು ಮಾತನಾಡುತ್ತಿದ್ದಾರೆ. ಈ ಬಗ್ಗೆ ಮುಂದಿನ ಬಾರಿ ಬಂದಾಗ ಸ್ಪಷ್ಟೀಕರಣ ನೀಡಿ ಎಂದೂ ಜೆಡಿಎಸ್ ಟ್ವೀಟ್‌ನಲ್ಲಿ ಒತ್ತಾಯಿಸಲಾಗಿದೆ.

**ಸೈಟ್ ಮಾರಾಟಕ್ಕೆ**
HI TECH HOSPITAL
ಹಿಂಭಾಗ, 30X40 60X40 ಉತ್ತರ ಪಶ್ಚಿಮ ಕಾರ್ನರ್ 30X40 ಉತ್ತರ.
ಕಿರಣ್ ಬೂಸ್ನೂರ್ (AGENT)
98440 63409, 97315 63409

**ಸೈಟ್ ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 50x33 ಪೂರ್ವ, 30x40 ಉತ್ತರ ಮನೆ, ಆಂಜನೇಯ ಬಡಾವಣೆಯಲ್ಲಿ
ಏಜೆಂಟರು ಎಸ್.ಯಲ್ಲೋಜಿರಾವ್
97418 11694

**ತಕ್ಷಣ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಅನುಭವವುಳ್ಳವರು ಕೆಲಸ ಮಾಡಲು Day & Night Shift ಮತ್ತು ಹೊಸದಾಗಿ ಸೇರುವವರು ಬೇಕಾಗಿದ್ದಾರೆ. ಸಂಪರ್ಕಿಸಿ.
94807 77338, 94821 09492

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
20x40 sqft, #523/37, ಶ್ರೀ ಸಿದ್ಧಗಂಗಾ ಹೊಸ ಬಡಾವಣೆ, ಟಾಟಾ ಕಾರ್ ಶೋ ರೂಂ ಹಿಂಭಾಗ, ಆವರಗೆರೆಯಲ್ಲಿ ಒಳ್ಳೆಯ ಇಂಟೀರಿಯರ್, ಟೀಕ್ ಮರದ ಕಿಟಕಿ, ಬಾಗಿಲುಗಳನ್ನೊಳಗೊಂಡ (ಟ್ರಿಪ್ಲೆಕ್ಸ್) ನಾಲ್ಕು ಬೆಡ್ ರೂಂಗಳ ಹೊಸ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಸಂಪರ್ಕಿಸಿ:
99720 13331

**ಮಾರಾಟಕ್ಕಿದೆ**
5-6 ವರ್ಷದ ಉತ್ತಮ ತಳಿ ಅಡಿಕೆ ತೋಟ, 3.18 ಎಕರೆ, ದಾವಣಗೆರೆಯಿಂದ 10 ಕಿ.ಮೀ.
ಫೋ. : 77950 10929

**ಮಳಿಗೆಗಳು ಬಾಡಿಗೆಗೆ ಇವೆ**
ಆರ್.ಎಂಸಿ ಲಿಂಕ್ ರಸ್ತೆಯ ದೇವರಾಜ ಬೋರ್‌ವೆಲ್ ಹತ್ತಿರದ ಕಾವಲಹಳ್ಳಿ ನಂಜುಂಡಪ್ಪ ಕಾಂಪ್ಲೆಕ್ಸ್‌ನ ಗ್ರೌಂಡ್ ಫ್ಲೋರ್, 1 ಮತ್ತು 2ನೇ ಮಹಡಿಗಳಲ್ಲಿ 20x60 ಅಳತೆಯ ಒಟ್ಟು 5 ಮಳಿಗೆಗಳು ಬಾಡಿಗೆಗೆ ಇವೆ. ಆಫೀಸಿಗೂ ಯೋಗ್ಯವಾಗಿವೆ. ಸಂಪರ್ಕಿಸಿ.
99455 95958, 94482 29865

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. ಬಿ ಬ್ಲಾಕ್, 5ನೇ ಮೇನ್, ಕಾರ್ನರ್, 3ನೇ ಕ್ರಾಸ್ ಸೈಟ್ ಅಳತೆ 10x30
ಫೋ. : 82177 72482

**ಕೆಲಸಕ್ಕೆ ಬೇಕಾಗಿದ್ದಾರೆ**
ಡೆಂಟಲ್ ಆರ್ಟ್ ಲ್ಯಾಬ್, ಇಂಡಸ್ಟ್ರಿಯಲ್ ಏರಿಯಾ, ಬಕ್ಕೇಶ್ವರ ರೈಸ್ ಮಿಲ್ ಹತ್ತಿರ, ಲೋಕಿಕೆರೆ ರಸ್ತೆ, ದಾವಣಗೆರೆ.
ಫೋ. : 99000 05433

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಆಸಕ್ತ ಯುವಕರು ಬೇಕಾಗಿದ್ದಾರೆ.
91106 21233

**LADY TEACHERS WANTED FOR 2023-24**
NTC - 4 Posts , PUC - 4 Posts, Degree - 4 Posts,
Contact : Vidya Vikas Convent,
Behind Araike Hospital, Davangere.
Mob : 83109 32579

**EC / ಇಸಿ**
E-swathu
Khatha Change
Building Licence
Call :
96118-66449

**ಕೆಲಸಕ್ಕೆ ಬೇಕಾಗಿದ್ದಾರೆ**
BE (Mech), Diploma (Mech), ITI
ವಿಷನ್ ಮೆಟಲ್ ರೂಫಿಂಗ್ಸ್
ಪಿ.ಬಿ ರೋಡ್, ದಾವಣಗೆರೆ.
E-mail : visionmetalroofings@gmail.com
74066 96581

**ಮನೆ ಬಾಡಿಗೆಗೆ ಇದೆ**
ಶ್ರೀ ಗುರು ಕೊಟ್ಟೂರೇಶ್ವರ ಬಡಾವಣೆ, ಗಣೇಶ್ ಮಿಲ್ ಹತ್ತಿರ, ನಾಲ್ಕು ಬೆಡ್ರೂಮ್ ಮನೆ ಬಾಡಿಗೆಗೆ ಇದೆ.
98803 99998, 97414 48981

**ಬೇಕಾಗಿದ್ದಾರೆ**
ಮನೆಗಳಿಗೆ ಸಿಲಿಂಡರ್ ವಿತರಣೆ ಮಾಡಲು, ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಆಪೆ ಆಟೋ ಅಥವಾ ಇತರೆ ವಾಹನ ಇದ್ದವರಿಗೆ ಆದ್ಯತೆ ನೀಡಲಾಗುವುದು.
ಆಸಕ್ತರು ಸಂಪರ್ಕಿಸಿ, ಹೊಸಂಗಡಿ ಗ್ಯಾಸ್ ಏಜೆನ್ಸಿ, ಗಾಂಧಿ ನಗರ, ಹರಿಹರ.
98440 08136, 99166 70799

**2BHK ಮನೆ ಬಾಡಿಗೆಗೆ ಇದೆ**
(East Facing)
2 BHK House for rent in Nijalingappa Badavane, 1st Main, 4th cross, Davanagere.
93800 40358

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
LPG ಗೋಡೌನ್ ಮ್ಯಾನೇಜರ್ ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 8.30 ರಿಂದ ಸಂಜೆ 6.30ರವರೆಗೆ. ಸಂಪರ್ಕಿಸಿ :
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ದಾವಣಗೆರೆ.

**ಬೇಕಾಗಿದ್ದಾರೆ**
ಮರ್ಚೆಂಟೈಸರ್ ಹಾಗೂ ಅಕೌಂಟೆಂಟ್ ಹುದ್ದೆಗೆ, ಅನುಭವವುಳ್ಳ BE / Diploma Textile, B.Com ಪದವಿ ಪಡೆದ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ.
99806 62860

**ಸೈಟುಗಳು ಮಾರಾಟಕ್ಕಿವೆ**
ಹಳೆ ಕುಂದುವಾಡದ ಬಳಿ 40x50 ಪಶ್ಚಿಮ ದಕ್ಷಿಣ ಕಾರ್ನರ್ ಮತ್ತು 30×60 ಪಶ್ಚಿಮ ಸೈಟುಗಳು ಮಾರಾಟಕ್ಕಿವೆ. (ಉದ್ದೇಶಿತ ಹೊಸ ಕೋರ್ಟ್ ಎದುರಿಗೆ) ಸಂಪರ್ಕಿಸಿ.
97432 09680

**ಸೈಟುಗಳು ಮಾರಾಟಕ್ಕಿವೆ**
40x60 ಉತ್ತರ, 30x50 ಪಶ್ಚಿಮ ಜೆ.ಹೆಚ್ ಪಟೇಲ್ ನಗರ, 30x40 ಕೆಹೆಚ್‌ಬಿ ಪಶ್ಚಿಮ, 30x52 ಶಿವಪಾರ್ವತಿ ಪಶ್ಚಿಮ, 30x50 ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ.
99727 00107

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**OFFICE SPACE FOR RENT**
Finance, Mini Bank, Co-op. Bank, ETC
with wash room facility
N.R. Road, Davangere.
94483 69523

**WANTED CENTRE HEAD AND TEACHERS**
FOR A PRE-SCHOOL
Female Candidates Who Are Graduate With Minimum Two Years Experience In The Education Field, With Good Communication Skill Are Requested. To Forward The Resume To
e-mail : chirantana.dvg@gmail.com
CALL : 63609 93735

**ಶ್ರೀ ವೆಂಕಟೇಶ್ವರ ಖಾನಾವಳಿ**
ಪ್ರತಿದಿನ ಹೋಳಿಗೆ ಊಟ ಮತ್ತು ರೊಟ್ಟಿ ಚಪಾತಿ, ರಾಗಿ, ಮುದ್ದೆ, ಪರೋಟ, ರಾಗಿ ರೊಟ್ಟಿ, ಊಟ ಸಿಗುತ್ತದೆ. ರಾಮ್ & ಕೋ ಸರ್ಕಲ್ ರಾಘವೇಂದ್ರ ಕಾಂಪ್ಲೆಕ್ಸ್
ಶ್ರೀ ವೆಂಕಟೇಶ್ವರ ಖಾನಾವಳಿ
ಫೋನ್ ನಂ. 9901236631

**ಖಾನಾವಳಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ**
ರೊಟ್ಟಿ ಮಾಡುವವರು, ಪಾತ್ರೆ ತೊಳೆಯುವರು ಟೇಬಲ್ ಕ್ಲೀನ್ ಮಾಡುವವರು ಬೇಕಾಗಿದ್ದಾರೆ. ಕೆಲಸದ ಸಮಯ: ಬೆಳಗ್ಗೆ 9:30 ಸಂಜೆ 7:00 ವರೆಗೂ ಮತ್ತು ಸಂಜೆ 5:00 ರಿಂದ 10:30 ವರೆಗೂ ಕೆಲಸ ಮಾಡಲು ಪಾರ್ಟ್ ಟೈಮ್ ಡ್ಯೂಟಿ ಇದೆ.
99012 36631

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : 63639-54459

**ನೇರ ಪರೀಕ್ಷೆಗಳು**
SSLC, PUC, BA, B.Com, BBA, MBA (ALL) B.Tech, Diploma, ITI, NTC,
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013

**WANTED**
CT Technician with minimum 2years of experience
Contact :
HARIHARA SCAN CENTER
1st main, 1st cross, J.C. Badavane, Harihar.
74831 82155

**TO - LET**
3 BHK ground floor Suitable for Godown & commercial (south)
2 BHK first floor (East)
#303/4, `Rohini complex'
P.J. Extension, 2nd Main Road, Stadium Road, Davangere.
96111 74878, 89707 89513

**ಬೇಕಾಗಿದ್ದಾರೆ**
PUC / DEGREE ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ: 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ
2000/- ದಿಂದ 1400/- ಕಂತುಗಳು,
ಸ್ಕಂದ ಚಿಟ್ ಫಂಡ್ಸ್- (ರಿ).
ಸಂಪರ್ಕಿಸಿ :
78997 75159

**WANTED**
A Degree candidates are required to work in auditors office.
Please Contact :
B.G. Basavarajappa
jayadeva Circle.
99001 42052

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. & ಪಿಯುಸಿ, & ಐಟಿಐ ಆಗಿರಬೇಕು.
9844541894, 9611966599

# ಬಿಜೆಪಿ ಟಿಕೆಟ್‌ಗಾಗಿ ಮಾಜಿ ಶಾಸಕ ಡಾ.ಡಿ.ಬಿ. ಗಂಗಪ್ಪ ಸತತ ಪ್ರಯತ್ನ



ಹೊನ್ನಾಳಿ, ಮಾ. 8 - ಮುಂದಿನ 2023 ನೇ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್‌ಗಾಗಿ ಸತತ ಪ್ರಯತ್ನ ನಡೆಸುತ್ತಿದ್ದೇನೆ, ನಮ್ಮ ಪಕ್ಷ ನನಗೆ ಅವಕಾಶ ಕೊಟ್ಟರೆ ಅವಳಿ ತಾಲ್ಲೂಕಿನಾದ್ಯಂತ ಅತೀ ಹೆಚ್ಚು ಮತ ಪಡೆದು ಗೆದ್ದು ಬರುತ್ತೇನೆ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಮುಖಂಡ ಡಾ.ಡಿ.ಬಿ. ಗಂಗಪ್ಪ ವಿಶ್ವಾಸ ವ್ಯಕ್ತಪಡಿಸದರು.

**ಹೊನ್ನಾಳಿ**

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ರಾಜ್ಯ ಮಟ್ಟದ ವರಿಷ್ಠರನ್ನು ಭೇಟಿ ಮಾಡಿ ಪಕ್ಷದಿಂದ ಟಿಕೆಟ್ ನೀಡುವಂತೆ ಮನವಿ ಮಾಡಿದ್ದೇನೆ, ಪಕ್ಷದಿಂದ ಟಿಕೆಟ್ ನೀಡಿದರೆ ಸ್ಪರ್ಧೆ ಮಾಡುತ್ತೇನೆ, ಇಲ್ಲದಿದ್ದರೆ ಪಕ್ಷ ಯಾರಿಗೆ ಟಿಕೆಟ್ ನೀಡುತ್ತದೋ ಅವರ ಪರವಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಪಕ್ಷದ ಯಾವುದೇ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳದೆ ಈಗ ದಿಢೀರ್ ಎಂದು ಟಿಕೆಟ್ ಕೇಳಿದರೆ ಪಕ್ಷ ಟಿಕೆಟ್ ನೀಡುತ್ತಾ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಯಾವುದೇ ಕಾರ್ಯಕ್ರಮಗಳಿಗೆ ನಮಗೆ ಆಹ್ವಾನ ಇರುತ್ತಿರಲಿಲ್ಲ, ಆದರೂ ನಾವು ರಾಜ್ಯಮಟ್ಟದ ಕಾರ್ಯಕ್ರಮ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಬಿಜೆಪಿ ನಾಯಕರು ಬಂದರೆ ನಾವೂ ಸಹ ಉಪಸ್ಥಿತರಿರುತ್ತಿದ್ದೆವು ಎಂದು ಅವರು ಉತ್ತರಿಸಿದರು.

ಸತ್ತಿಗೆ ಲೋಕೇಶ್, ನರೇಂದ್ರ ಕಂಬಳ್ಳಿ, ಅರಬಗಟ್ಟೆ ರಮೇಶ್, ಕೋಮೇಶಪ್ಪ, ರಾಜಪ್ಪ, ರವೀಂದ್ರ, ಸಿದ್ದಪ್ಪ ಹಾಗೂ ಇತರರು ಇದ್ದರು.

# ಎಂ.ಎಸ್ ವಿಕಾಸ್ ಅವರಿಗೆ ಜನ್ಮ ದಿನದ ಶುಭಾಶಯ ಕೋರಿದ ಜಿ.ಎಸ್.ಶ್ಯಾಮ



ದಾವಣಗೆರೆ, ಮಾ. 8 - ಜನತಾವಾಣಿ ಸಂಪಾದಕ ಎಂ.ಎಸ್.ವಿಕಾಸ್ ಅವರ 50ನೇ ವರ್ಷದ ಜನ್ಮದಿನದ ಸಂದರ್ಭದಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಆಕಾಂಕ್ಷಿ ಜಿಎಸ್.ಶ್ಯಾಮ್, ಬಿ.ಟಿ.ಸಿದ್ದಪ್ಪ ಅವರ ನೇತೃತ್ವದ ತಂಡ ಜನುಮ ದಿನದ ಶುಭಾಶಯ ಕೋರಿದರು.

ಶ್ಯಾಮ್ ಅವರೊಂದಿಗೆ ಶೋಷಿತ ವರ್ಗಗಳ ಒಕ್ಕೂಟದ ಮುಖಂಡ ಬಾಡದ ಆನಂದರಾಜ್, ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಬಿಎಸ್.ರಮೇಶ್, ಪಿ.ಆರ್. ಹಳ್ಳಿ ಶಿವಕುಮಾರ್, ಪ್ಯಾಟೆ ಹನುಮಪ್ಪ, ಗುಮ್ಮನೂರು ಶ್ರೀನಿವಾಸ್, ಲೋಕಿಕೆರೆ ರಾಮಸ್ವಾಮಿ,ಅಣಜಿ ಶಾಂತಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಮಲಬಾರ್ ಗೋಲ್ಡ್‌ನಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ.8- ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ಗ್ರಾಹಕರಾದ ಲೀಲಾ, ಮಾಜಿ ಮಹಾಪೌರರಾದ ರೇಖಾ ನಾಗರಾಜ್, ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾದ ಡಾ॥ ಶಿಲ್ಪಾಶ್ರೀ, ಅವರುಗಳನ್ನು ಸನ್ಮಾನಿಸಲಾಯಿತು. ಇವರು ಕೇಕ್ ಕತ್ತರಿಸುವ ಮೂಲಕ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ದಾವಣಗೆರೆ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಮುಖ್ಯಸ್ಥರಾದ ಬೇಸಲ್‌ರಾಜನ್ ಮತ್ತು ಸರ್ಫಸ್ ಹಾಗೂ ಗ್ರಾಹಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಬಕ್ಕೇಶ್ವರ ಮಹಾಸ್ವಾಮಿ ಸೇವಾಸಂಘದಿಂದ ಅಥಣಿ ವೀರಣ್ಣ ಅವರಿಗೆ ಅಭಿನಂದನೆ



ದಾವಣಗೆರೆ, ಮಾ. 8 - ದಾವಣಗೆರೆ ವಿಶ್ವವಿದ್ಯಾಲಯದ ವತಿಯಿಂದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವ ಲೆಕ್ಕ ಪರೀಶೋಧಕರಾದ ಅಥಣಿ ವೀರಣ್ಣ ಅವರನ್ನು ದೇವಸ್ಥಾನದ ಆವರಣದಲ್ಲಿ ಶ್ರೀ ಗುರುಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ ಹಾಗೂ ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ರಥೋತ್ಸವ ಕಮಿಟಿ ವತಿಯಿಂದ ಅಭಿನಂದಿಸಲಾಯಿತು.

# ಚೌಡೇಶ್ವರಿ ದೇವಸ್ಥಾನದಲ್ಲಿ ಪ್ರಸಾದ ವಿತರಣೆ



ದಾವಣಗೆರೆ, ಮಾ. 8 - ನಗರದ ಕುಂದುವಾಡ ರಸ್ತೆಯಲ್ಲಿರುವ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಹುಣ್ಣಿಮೆಯ ಪ್ರಯುಕ್ತ ಪತ್ರ ಬರಹಗಾರ ಗಿರಿರಾಜ ಡಿ.ಆರ್ ಮತ್ತು ಕುಟುಂಬ ವರ್ಗದವರು ಪ್ರಸಾದದ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ದೇವಸ್ಥಾನ ಕಮಿಟಿಯ ಪದಾಧಿಕಾರಿಗಳು ಹಾಗೂ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಬಾಲ್ಯವಿವಾಹಗಳಾಗುತ್ತಿರುವುದು ವಿಷಾದದ ಸಂಗತಿ

## ವನಿತಾ ಸಮಾಜದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ವ್ಯಾಕ್ಯುಲತೆ

ದಾವಣಗೆರೆ, ಮಾ. 8- ರಾಜ್ಯದಲ್ಲಿ ಬಾಲ್ಯವಿವಾಹ ಪದ್ಧತಿಯಲ್ಲಿ ದಾವಣಗೆರೆ ಜಿಲ್ಲೆ ಮೂರನೇ ಸ್ಥಾನದಲ್ಲಿದ್ದು, ಜಿಲ್ಲೆಯಲ್ಲಿ ಶೇ. 19 ರಷ್ಟು ಬಾಲ್ಯ ವಿವಾಹಗಳಾಗುತ್ತಿರುವುದು ವಿಷಾದದ ಸಂಗತಿ. ಇದಕ್ಕೆ ಕಡಿವಾಣ ಹಾಕುವ ಅಗತ್ಯವಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಹೇಳಿದರು.



ನಗರದ ವನಿತಾ ಸಮಾಜದ ಶ್ರೀ ಸತ್ಯ ಸಾಯಿ ರಂಗಮಂದಿರದಲ್ಲಿ ವನಿತಾ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾ ಚರಣೆ ಹಾಗೂ ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಬಾಲ್ಯ ವಿವಾಹಗಳಾಗುತ್ತಿರುವುದು ಕಂಡು ಬಂದಿದ್ದು, ಲೈಂಗಿಕ ದೌರ್ಜನ್ಯ ಪ್ರಕರಣಗಳು ಕೂಡ ಹೆಚ್ಚಾಗುತ್ತಿವೆ ಎಂದರು.

ಬಾಲ್ಯವಿವಾಹ ಪದ್ಧತಿ ಕೂಡ ಸಾಮಾಜಿಕ ಪಿಡುಗಾಗಿದ್ದು, ಚಿಕ್ಕ ವಯಸ್ಸಿನಲ್ಲಿ ಮದುವೆ ಆಗುವುದರಿಂದ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಮಕ್ಕಳು ಅಪೌಷ್ಟಿಕತೆಯಿಂದ ನರಳಬೇಕಾಗುತ್ತದೆ. ಮಕ್ಕಳ ಆರೋಗ್ಯದ ಕಡೆ ಹೆಚ್ಚು ಗಮನಹರಿಸುವ ಅಗತ್ಯವಿದೆ ಎಂದು ಹೇಳಿದರು.

ಪುರಾಣ ಕಾಲದಿಂದಲೂ ಮಹಿಳೆ ದೌರ್ಜನ್ಯಕ್ಕೆ ಒಳಗಾಗಿದ್ದಳು. ಆದರೆ ಅಂದಿನ ಕಾಲದಲ್ಲಿ ಎಲ್ಲವನ್ನೂ ಸಹಿಸಿಕೊಂಡು ಜೀವನ ಮುನ್ನಡೆಸಿಕೊಂಡು ಬರುತ್ತಿದ್ದಳು. ಶಿಕ್ಷಣದಿಂದ ವಂಚಿತಳಾಗಿದ್ದಳು. ಆದರೀಗ ಮಹಿಳೆ ಶಿಕ್ಷಣ ಪಡೆಯುವ ಮೂಲಕ ಎಲ್ಲಾ ರಂಗಗಳಲ್ಲೂ ಪ್ರಗತಿ ಸಾಧಿಸುವ ಮೂಲಕ ಪುರುಷರಷ್ಟೇ ಸರಿ ಸಮಾನವಾಗಿ ಬೆಳೆದಿದ್ದಾಳೆ ಎಂದರು.

ಸಮಾಜ ಸೇವಕಿ ಡಾ. ಶಾಂತಾಭಟ್ ವನಿತಾ ಸೇವಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಈ ಪ್ರಶಸ್ತಿ 'ಕಸ-ರಸ' ಅಭಿಯಾನದ ಪ್ರತಿಯೊಬ್ಬ ಕಾರ್ಯಕರ್ತರಿಗೂ ಸಲ್ಲುತ್ತದೆ. ಇನ್ನೂ ಪೂರ್ಣಗೊಂಡಿಲ್ಲ. ಜನರ ಸಹಭಾಗಿತ್ವ ಮತ್ತು ಸಹಕಾರದೊಂದಿಗೆ ಈ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಾಗಿದೆ. ತನ್ಮೂಲಕ ಸ್ವಚ್ಛ, ಸುಂದರ, ಸಮೃದ್ಧ ಭಾರತ ನಿರ್ಮಾಣದತ್ತ ಹೆಜ್ಜೆ ಹಾಕಬೇಕಾಗಿದೆ ಎಂದು ಹೇಳಿದರು.

ಜನರ ಮನಸ್ಸಿನಲ್ಲಿ ಪರಿಸರ ಸ್ವಚ್ಛತೆಯ ಅರಿವಿನ ಬೀಜ ಬಿತ್ತಿದ್ದೇವೆ. ಅದನ್ನು ಪೋಷಿಸುವ ಕೆಲಸವಾಗಬೇಕಷ್ಟೇ ಎಂದರು.

ವನಿತಾ ಸಮಾಜದ ಅಧ್ಯಕ್ಷರಾದ ಪದ್ಮ ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸುಷ್ಮಾಮೋಹನ್, ಶ್ರೀಮತಿ ರೇಖಾ ಶಾಮನೂರು ಗಣೇಶ್ ಉಪಸ್ಥಿತರಿದ್ದರು.

ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ಬಾಲಕಿಯರು ಭರತ ನಾಟ್ಯ ಪ್ರದರ್ಶಿಸಿದರು. ಅನುರಾಧ ರಮೇಶ್, ಸೂರ್ಯಪ್ರಭ ಪ್ರಾರ್ಥಿಸಿದರು. ಉಷಾ ರಂಗನಾಥ್ ಸ್ವಾಗತಿಸಿದರು. ಗೀತಾ ಬದರಿನಾಥ್ ನಿರೂಪಿಸಿದರು. ಸುನೀತ ಇಂದೂಧರ್, ನಳಿನಾ ಅಚ್ಯುತ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ನಾಗರತ್ನ ಜಗದೀಶ್, ಮಂಜುಳಾ ಬಸವಲಿಂಗಪ್ಪ, ಕಲಾ ಭೀಮಾ ನಂದ್, ಪ್ರೇಮಾ ನಾಗರಾಜ್ ಮತ್ತಿತರರು ಇದ್ದರು.

# ಮತದಾರರ ಜೊತೆಗೆ ನೇರ ಸಂಪರ್ಕ ಇಟ್ಟುಕೊಳ್ಳಬೇಕು

## ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕಿವಿಮಾತು

ದಾವಣಗೆರೆ, ಮಾ. 8- ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಸ್ಥಿತಿಗತಿ ಬಗ್ಗೆ ತಿಳಿಯಲು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮಂಗಳವಾರ ನಗರಕ್ಕೆ ಭೇಟಿ ನೀಡಿ ಸಭೆ ನಡೆಸಿದರು.



ಬಿಜೆಪಿ ಕಛೇರಿಯಲ್ಲಿ ಪ್ರಮುಖರ ಸಭೆ ನಡೆಸಿದ ಅವರು ಬಳಿಕ ದಾವಣಗೆರೆ-ಹರಿಹರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಸಭಾಂಗಣದಲ್ಲಿ ಶಕ್ತಿ ಕೇಂದ್ರದ ಪ್ರಮುಖರ ಜೊತೆಗೆ ಚರ್ಚೆ ನಡೆಸಿದರು.

ಮತದಾರರ ಜೊತೆಗೆ ನೇರ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆಯನ್ನು ತಿಳಿ ಹೇಳಬೇಕು. ಪಕ್ಷದ ಸಿದ್ಧಾಂತವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು. ಆ ಸಿದ್ಧಾಂತದಂತೆ ನಡೆದುಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಪ್ರತಿ ಕ್ಷೇತ್ರದ ವಿವರ ಪಡೆದರು. ಅವರು ಕೆಲಸ ಮಾಡಿಲ್ಲ. ಇವರು ಕೆಲಸ ಮಾಡಿಲ್ಲ ಎಂದು ದೂರುತ್ತಾ ಕೂರದೇ ನೀವು ಕೆಲಸ ಮಾಡಿ. ಯಾರಿಗೆ ಟಿಕೆಟ್ ನೀಡಬೇಕು ಎಂದು ಪಕ್ಷ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಇದೇ ದಿನಾಂಖ 25ರಂದು ನಗರದಲ್ಲಿ ಬೃಹತ್ ಸಮಾವೇಶ ನಡೆಸಲು ನಿರ್ಧರಿಸಲಾಗಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಾವೇಶ ನಡೆಯುವ ಸ್ಥಳವನ್ನು ಸಂತೋಷ್ ಪರಿಶೀಲಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ, ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಜಗಳೂರು ಶಾಸಕ ಎಸ್.ವಿ. ರಾಮಚಂದ್ರ, ಮಾಯಕೊಂಡ ಶಾಸಕ ಪ್ರೊ॥ ಲಿಂಗಣ್ಣ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಯುವ ಮುಖಂಡ ಜಿ.ಎಸ್. ಅನಿತ್ ಮತ್ತಿತರರು ಈ ವೇಳೆ ಇದ್ದರು.

# ಜಿಲ್ಲೆಯ ವಿವಿಧೆಡೆ ನಾಳೆ, ನಾಡಿದ್ದು ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ

ದಾವಣಗೆರೆ, ಮಾ.8- ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಸಭಾ ವಿಪಕ್ಷ ನಾಯಕ ಸಿದ್ದರಾಮಯ್ಯ ಮಾ.10 ಮತ್ತು 11 ರಂದು ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಯುವ ಪ್ರಜಾಧ್ವನಿ ಸಮಾವೇಶದಲ್ಲಿ ಭಾಗವಹಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದಲ್ಲಿನ ಆಡಳಿತ ವೈಫಲ್ಯ, ಭ್ರಷ್ಟಾಚಾರದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಪ್ರಜಾಧ್ವನಿ ಯಾತ್ರೆಯ ಮುಂದುವರೆದ ಭಾಗವಾಗಿ ಚನ್ನಗಿರಿ, ಮಾಯಕೊಂಡ, ಜಗಳೂರು, ಹೊನ್ನಾಳಿ, ಹರಿಹರ ವಿಧಾನಸಭಾ ಕ್ಷೇತ್ರಗಳಲ್ಲಿ ಸಮಾವೇಶ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮಾ.10 ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಚನ್ನಗಿರಿ, ಸಂಜೆ 4 ಗಂಟೆಗೆ ಮಾಯಕೊಂಡ ಮೀಸಲು ಕ್ಷೇತ್ರದ ವ್ಯಾಪ್ತಿಯ ಬಸವಾಪಟ್ಟಣ ಹಾಗೂ ಸಂಜೆ 6ಕ್ಕೆ ಜಗಳೂರಿನಲ್ಲಿ ಪ್ರಜಾಧ್ವನಿ ಯಾತ್ರೆ ನಡೆಯಲಿದೆ. ಮಾ.11ರ ಶನಿವಾರ ಬೆಳಗ್ಗೆ 11 ಗಂಟೆಗೆ ಹೊನ್ನಾಳಿ, ಮಧ್ಯಾಹ್ನ 3 ಕ್ಕೆ ಹರಿಹರದ ಯಾತ್ರೆಯಲ್ಲಿ ಭಾಗವಹಿಸಿ, ನಂತರ ರಾಣೇಬೆನ್ನೂರಿಗೆ ತೆರಳುವರು ಎಂದರು.

ಯಾತ್ರೆಯಲ್ಲಿ ಸಿದ್ದರಾಮಯ್ಯ ಅವರೊಟ್ಟಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಸತೀಶ್ ಜಾರಕಿಹೊಳಿ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಮೀರ್ ಅಹಮ್ಮದ್, ಬಸವರಾಜ ರಾಯರೆಡ್ಡಿ, ಶಾಸಕ ಶಾಮನೂರು ಶಿವಶಂಕರಪ್ಪ ಒಳಗೊಂಡಂತೆ ಅನೇಕ ಗಣ್ಯರು, ಜನಪ್ರತಿನಿಧಿಗಳು ಭಾಗವಹಿಸುವರು ಎಂದರು.

ಬಿಜೆಪಿಯು ಶೇ.40 ಕಮೀಷನ್ ಸರ್ಕಾರವಾಗಿದ್ದು, ರಾಜ್ಯದಲ್ಲಿ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಕಾಂಗ್ರೆಸ್‌ನವರು ಆರೋಪ ಮಾಡಿದಾಗ ಸಾಕ್ಷಿ ಕೊಡಿ ಎಂದು ಬಿಜೆಪಿಯವರು ಹೇಳುತ್ತಿದ್ದರು. ಈಗ ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಅವರ ಪುತ್ರ 40 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದು ಭ್ರಷ್ಟಚಾರ ಆರೋಪಕ್ಕೆ ಕನ್ನಡಿ ಹಿಡಿದಂತಿದೆ. ಮುಖ್ಯಮಂತ್ರಿ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಎ.ನಾಗರಾಜ್, ಎಸ್.ಮಲ್ಲಿಕಾರ್ಜುನ್, ಕೆ.ಜಿ.ಶಿವಕುಮಾರ್, ಪ್ರಕಾಶ್ ಪಾಟೀಲ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾಬಾಯಿ, ಪ್ರಧಾನ ಕಾರ್ಯದರ್ಶಿ ಸುಷ್ಮಾಪಾಟೀಲ್, ಎಚ್.ಜೆ. ಮೈನುದ್ದೀನ್, ಸೈಯದ್ ಜಿಕ್ರಿಯಾ ಮತ್ತಿತರರಿದ್ದರು.

# ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕಲಾ-ವಿಜ್ಞಾನ ಪ್ರದರ್ಶನ

ದಾವಣಗೆರೆ, ಮಾ.8- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ವಾರ್ಷಿಕ ಕಲಾ ಮತ್ತು ವಿಜ್ಞಾನ ಮಾದರಿ ಪ್ರದರ್ಶನ ಆಯೋಜಿಸಲಾಗಿತ್ತು,



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಡಾ. ಎಂ.ಜಿ ಬಸವನಗೌಡ ಮಾತನಾಡುತ್ತಾ, ರಾಷ್ಟ್ರೋತ್ಥಾನ ಶಾಲೆಯು ಮಕ್ಕಳಲ್ಲಿ ವಿದ್ಯಾರ್ಜನೆಯ ಜೊತೆ ಜೊತೆಗೆ ಸಂಸ್ಕಾರಯುತ, ಮೌಲ್ಯಯುತ ಶಿಕ್ಷಣವನ್ನು ನೀಡುತ್ತಾ ಬಂದಿದೆ. ಹಾಗೆಯೇ ಮಕ್ಕಳು ಶಾಲಾ ಕಲಿಕಾ ಮಟ್ಟದಲ್ಲಿಯೇ ವಿಜ್ಞಾನದ ಸಂಶೋಧನೆಯನ್ನು ಮನದಟ್ಟು ಮಾಡಿಕೊಳ್ಳುತ್ತಿರುವುದು ನಿಜಕ್ಕೂ ಸಂತಸದ ವಿಷಯವಾಗಿದೆ ಎಂದರು. ಕೇಂದ್ರದ ಸಸ್ಯ ಸಂರಕ್ಷಣಾ ವಿಭಾಗದ ವಿಷಯ ತಜ್ಞ ಡಾ. ಟಿ ಜಿ ಅವಿನಾಶ್ ಮಾತನಾಡಿ ಶಿಸ್ತು, ಮೌಲ್ಯಯುತ ಶಿಕ್ಷಣ ಜೀವನದಲ್ಲಿ ಎಷ್ಟು ಸಹಕಾರಿಯಾಗುವುದು ಎಂಬುದರ ಬಗ್ಗೆ ವಿವರಿಸಿದರು.

ಗುಜರಾತ್ ರಾಜ್ಯದ ಅಹಮದಾಬಾದ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶಕ್ಕೆ ಆಯ್ಕೆಯಾದ ಕು.ಅನಘ ಮತ್ತು ಆರ್. ಪ್ರಸಾದ್ ಪೂಜಾರ್ ಅವರುಗಳು ರಾಷ್ಟ್ರಮಟ್ಟದಲ್ಲಿ ಮಂಡಿಸಿ ದ ಪ್ರಬಂಧವನ್ನು ವೇದಿಕೆಯಲ್ಲಿ ಮಂಡಿಸಿದರು.

ವವೇದಿಕೆಯಲ್ಲಿ 'ಚಿನ್ನರ ಬಣ್ಣ' ಶೀರ್ಷಿಕೆಯಡಿಯಲ್ಲಿ ಶೈಕ್ಷಣಿಕ ವರ್ಷದಲ್ಲಿ ಶಾಲಾ ವಿದ್ಯಾರ್ಥಿಗಳು ಚಿತ್ರಿಸಿದ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಹಾಗೆಯೇ ಒಂದನೇ ತರಗತಿಯ ಮಕ್ಕಳು ದೇಶದ ವಿಜ್ಞಾನಿಗಳ ಸಾಧನೆಯನ್ನು ಸ್ಮರಿಸುತ್ತಾ ನೃತ್ಯವನ್ನು ಮಾಡು ವುದರ ಮೂಲಕ ಗೌರವ ಸಲ್ಲಿಸಿದರು. ಸಂಸ್ಥೆಯ ಕಾರ್ಯದರ್ಶಿ ಜಯಣ್ಣ, ಪ್ರಾಂಶುಪಾಲ ಮಂಜುನಾಥ, ಶೈಕ್ಷಣಿಕ ಸಂಯೋ ಜಕ ಶಿವರಾಜ ಮತ್ತಿತರರು ಉಪಸ್ಥಿತರಿದ್ದರು.

## ಕುಂಬಳೂರು : ಹನುಮಂತ ದೇವರ ತೇರು

ಶ್ರೀ ಹನುಮಂತ ದೇವರ ರಥೋತ್ಸವವು ಇಂದು ಜರುಗಲಿದೆ. ಇಂದು ಬೆಳಿಗ್ಗೆ 8.30ಕ್ಕೆ ಆನೆ ಉತ್ಸವ, ಮಧ್ಯಾಹ್ನ 12ಕ್ಕೆ ಹರಿಸೇವೆ. ಭಕ್ತಾದಿಗಳಿಂದ ಹರಕೆ, ಬಾಯಿ ಬೀಗ, ಕಿವಿ ಚುಚ್ಚುವುದು, ಜವಳ, ದಿಂಡು ಉರುಳು ಸೇವೆ ಸೇರಿದಂತೆ, ವಿವಿಧ ಹರಕೆಗಳು ನಡೆಯಲಿದ್ದು, ಮಧ್ಯಾಹ್ನ 3 ಗಂಟೆಗೆ ಸಂಪ್ರದಾಯದಂತೆ ಸರಳ ರಥೋತ್ಸವ ನೆರವೇರಲಿದೆ. ಇದೇ ದಿನ ತಡರಾತ್ರಿ (ಶುಕ್ರವಾರ ಬೆಳಗಿನ ಜಾವ) ಸ್ವಾಮಿಯ ಮಹಾರಥೋತ್ಸವವು ಶ್ರೀ ಬಸವೇಶ್ವರ ಶ್ರೀ ಬೀರಲಿಂಗೇಶ್ವರ ದೇವರಗಳೊಡಗೂಡಿ ಜರುಗಲಿದೆ. ನಾಳೆ ಶುಕ್ರವಾರ ಬೆಳಿಗ್ಗೆ 10 ರಿಂದ 11.30ರವರೆಗೆ ಸಾಮೂಹಿಕ ವಿವಾಹ ನಡೆಯಲಿದೆ.

# ಗ್ರಾಪಂನಿಂದ ನಂದಿಗಾವಿ ಸರ್ಕಾರಿ ಶಾಲೆಗೆ ಪೀಠೋಪಕರಣ



ಹರಿಹರ, ಮಾ.8- ತಾಲ್ಲೂಕಿನ ನಂದಿಗಾವಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ವತಿಯಿಂದ ಕಲಿಕೋಪಕರಣ ಮತ್ತು ಪೀಠೋಪಕರಣ ಹಸ್ತಾಂತರ ಕಾರ್ಯಕ್ರಮ ಆಯೋಜಿಸಲಾಗಿತ್ತು.

**ಹರಿಹರ**

ಗ್ರಾ.ಪಂ.ಸದಸ್ಯ ರಾಜಣ್ಣ ವಿಜ್ಞಾನ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿ, ಈ ರೀತಿಯ ಕಲಿಕಾ ಚಟುವಟಿಕಗಳನ್ನು ಹಮ್ಮಿಕೊಳ್ಳುವುದರಿಂದ ಸರ್ಕಾರಿ ಶಾಲಾ ಮಕ್ಕಳು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಲು ಸಹಕಾರಿಯಾಗುತ್ತದೆ. ಸರ್ಕಾರಿ ಶಾಲೆಯಲ್ಲಿ ಪ್ರತಿಭಾವಂತ ಶಿಕ್ಷಕರಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ ಮನವಿ ಮಾಡಿದರು.

ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಪೀಠೋಪಕರಣಗಳನ್ನು ಶಾಲೆಗೆ ಹಸ್ತಾಂತರಿಸಿದರು. ಶಿಕ್ಷಣ ಇಲಾಖೆ ಇಸಿಓ ಹರೀಶ್ ನೋಟಗಾರ ಮಾತನಾಡಿ, ಸ್ಥಳಿಯ ಸಂಸ್ಥೆಗಳು ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಸ್ವಾಗತಾರ್ಹ ಎಂದರು. ಅಧ್ಯಕ್ಷತೆ ಯನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷ ಶಿವಣ್ಣ ವಹಿಸಿದ್ದರು. ಸಿಆರ್‌ಪಿ ಕಟ್ಟ ಚನ್ನಕೇಶವ, ಶ್ರೀಧರ, ಮುಖ್ಯ ಶಿಕ್ಷಕರಾದ ಸಮೀನ ಪರ್ವಿನ್ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ ಪಂಚಮಸಾಲಿ ಪೀಠಕ್ಕೆ ಬಿ.ಎಲ್. ಸಂತೋಷ್ ಭೇಟಿ



ಮಲೇಬೆನ್ನೂರು, ಮಾ. 8- ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠಕ್ಕೆ ಮಂಗಳವಾರ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ. ಎಲ್. ಸಂತೋಷ್ ಭೇಟಿ ನೀಡಿದರು.

ಮಠದ ಆವರಣದಲ್ಲಿ ಹರಧ್ಯಾನ ಮಂದಿರಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ಗುರುಪೀಠದ ಲಿಂಗೈಕ್ಯ ಡಾ. ಮಹಾಂತ ಶ್ರೀಗಳ ಗದ್ದುಗೆಗೆ ನಮಸ್ಕರಿಸಿದರು. ನಂತರ ಗುರುಪೀಠದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳೊಡನೆ ಚರ್ಚಿಸಿದರು.

ನಂತರ ಗುರುಪೀಠದ ವಚನಾನಂದ ಶ್ರೀಗಳ ಆಶೀರ್ವಾದ ಪಡೆದರು. ಶ್ರೀಗಳೊಡನೆ ಮಠದ ಆವರಣದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಿದರು. ಹರಿಹರದ ತುಂಗಭದ್ರಾ ನದಿ ತಟದಲ್ಲಿ ನಿರ್ಮಾಣವಾಗುತ್ತಿರುವ ತುಂಗಭದ್ರಾರತಿ ಕಾಮಗಾರಿ ಬಗ್ಗೆ ಮಾಹಿತಿ ಪಡೆದರು. ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ, ಶಾಸಕ ಅರುಣ್ ಪೂಜಾರ್, ವಿಧಾನ ಪರಿಷತ್ ಸದಸ್ಯ ಕೆ.ಎನ್. ನವೀನ್ ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಕಾರ್ಯ ದರ್ಶಿ ಜಗದೀಶ್, ಸಂಘ ಪರಿವಾರದ ಮುಖಂಡ ಜೇಷ್ಟ ಪಡಿವಾಳ್, ಪೀಠದ ಟ್ರಸ್ಟಿಗಳಾದ ಬಿ.ಸಿ. ಉಮಾಪತಿ, ಚಂದ್ರಶೇಖರ್ ಪೂಜಾರ್, ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ, ನಿರಂಜನ ದೀಟೂರು ಇದ್ದರು.

# ಕನ್ನಡ ಕಟ್ಟಿ ಬೆಳೆಸುವ ಕಾರ್ಯ ಮನೆಯಿಂದಲೇ ಪ್ರಾರಂಭವಾಗಬೇಕು

ದಾವಣಗೆರೆ, ಮಾ.8- ಮಕ್ಕಳಿಗೆ ತಾಯಿಯೇ ಮೊದಲ ಶಿಕ್ಷಕಿ ಬಾಲ್ಯಾವಸ್ಥೆಯಲ್ಲಿ ತಾಯಿ ಯಾವ ಭಾಷೆ ಕಲಿಸುತ್ತಾಳೋ ಅದೇ ಭಾಷೆಯನ್ನೇ ಮಗು ತನ್ನ ಭಾಷೆಯೆಂದು ಭಾವಿಸುತ್ತದೆ. ಹಾಗಾಗಿ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವಂತೆ ಮಕ್ಕಳಿಗೆ ಪ್ರೇರಣೆ ನೀಡಬೇಕೆಂದು ಹಿರಿಯ ಕನ್ನಡ ಪರ ಹೋರಾಟಗಾರ ನಾಗೇಂದ್ರ ಬಂಡೀಕರ್ ಮನವಿ ಮಾಡಿದರು.

ಸುವರ್ಣ ಕರ್ನಾಟಕ ವೇದಿಕೆಯು ತಾಲ್ಲೂಕಿನ ಗೋಣಿವಾಡದ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಗ್ರಾಮೀಣ ಮಾತೆಯರ ಕನ್ನಡ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

ತಾಯಂದಿರು ಆಂಗ್ಲ ಭಾಷೆಯ ವ್ಯಾಮೋಹದಿಂದ ಹೊರ ಬರಬೇಕು. ಪ್ರತಿ ಗ್ರಾಮಗಳಲ್ಲಿ ಇಂಗ್ಲಿಷ್ ಕಾನ್ವೆಂಟ್ ಶಾಲೆಗಳು ನಾಯಿ ಕೊಡೆಗಳಂತೆ ಉದ್ಭವವಾಗಿದ್ದು, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿಗೆ ಕುತ್ತು ಬಂದಿದೆ. ಈ ಕೆಟ್ಟ ಬೆಳವಣಿಗೆಗೆ ಕನ್ನಡ ಅನ್ನದ ಭಾಷೆ ಅಲ್ಲ ಎಂದು ತಪ್ಪು ಕಲ್ಪನೆ ಪೋಷಕರಲ್ಲಿದೆ. ಇದರಿಂದ ಕನ್ನಡ ಶಾಲೆಗಳು ಸೊರಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮೀಣ ಮಾತೆಯರನ್ನು ಕನ್ನಡ ಭಾಷಾ ಶಿಕ್ಷಣದ ಕಡೆ ಒಲವು ಮೂಡಿಸಲು ಆಯೋಜಿಸಿರುವ ಹೊಸ ಬದಲಾವಣೆ ತರಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಮಾತನಾಡಿ, ಕನ್ನಡ ನಾಡು-ನುಡಿಗಾಗಿ ಹೋರಾಟ ನಡೆಸುವ ಸಂಘಟನೆಗಳು ಅತ್ಯಗತ್ಯವೆನಿಸಿದರೆ ಹೋರಾಟದ ಮೂಲಕ ಕನ್ನಡ ಕಟ್ಟಬಹುದು. ಈ ರೀತಿ ಹೊಸ ಆಲೋಚನೆಗಳ ಮೂಲಕ ಮಾತೆಯರಲ್ಲಿ ಜಾಗೃತಿ ಮೂಡಿಸಿ, ಕನ್ನಡ ಭಾಷೆ ಮತ್ತು ಕನ್ನಡ ಮಾಧ್ಯಮ ಶಿಕ್ಷಣವನ್ನು ಉತ್ತೇಜಿಸಬೇಕಾಗಿದೆ ಎಂದರು.



ಕಾರ್ಯಕ್ರಮ ಆಯೋಜಿಸಲು ಸುತ್ತಮುತ್ತಲಿನ ಜನರು ನೀಡಿರುವ ಬೆಂಬಲ ಅವಿಸ್ಮರಣೀಯವಾದದ್ದು. ಕನ್ನಡ ಅಳಿಯುವ ಭಾಷೆಯಲ್ಲ, ಅದನ್ನು ಬೆಳೆಸಬೇಕಾದ ಹೊಣೆಗಾರಿಕೆ ಕನ್ನಡಿಗರ ಮೇಲಿದೆ ಎಂದರು.

**ಕನ್ನಡಪರ ಹೋರಾಟಗಾರ ನಾಗೇಂದ್ರ ಬಂಡೇಕರ್**

ಕಾರ್ಯಕ್ರಮದಲ್ಲಿ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ಲಯನ್ಸ್ ವಾಸುದೇವ ರಾಯ್ಕರ್, ರಾಜ್ಯ ಉಪಾಧ್ಯಕ್ಷ ಹೆಚ್. ಪರಶುರಾಮ್, ನಮ್ಮ ಜೈ ಕರ್ನಾಟಕ ವೇದಿಕೆಯ ರಾಜ್ಯಾಧ್ಯಕ್ಷ ಮಂಜುನಾಥ್ ಗೌಡ, ನಾಗರಾಜಪ್ಪ, ಮಂಜುನಾಥ ಎನ್.ಎಂ., ಅನಂತಲಕ್ಷ್ಮಿ, ಬಸವರಾಜ್, ಅಂಜಿನಪ್ಪ, ಹನುಮಂತಪ್ಪ, ಬಸವರಾಜಯ್ಯ, ರುದ್ರಸ್ವಾಮಿ ಮತ್ತು ಇತರರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ವಿಶ್ವನಾಥ್ ಸ್ವಾಗತಿಸಿದರು.

# ಪ್ರಿಯಾಂಕ ಆಪ್ತ ಸಹಾಯಕನ ವಿರುದ್ಧ ಎಫ್‌ಐಆರ್

ಮೀರತ್ (ಉತ್ತರ ಪ್ರದೇಶ), ಮಾ. 8 – ಮಹಿಳೆಯೊಬ್ಬರಿಗೆ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರ ಅವರ ಆಪ್ತ ಸಹಾಯಕ ಸಂದೀಪ್ ಸಿಂಗ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಕಾಂಗ್ರೆಸ್ ಸದಸ್ಯೆ ಹಾಗೂ ನಟಿ ಅರ್ಚನಾ ಗೌತಮ್ ಅವರಿಗೆ ಬೆದರಿಕೆ ಹಾಕಲಾಗಿದೆ ಎಂದು ಅವರ ತಂದೆ ಗೌತಮ ಬುದ್ಧ ಅವರು ದೂರು ದಾಖಲಿಸಿದ್ದಾರೆ. ಅವರ ವಿರುದ್ಧ ಅವಮಾನ, ಬೆದರಿಕೆ, ಮಹಿಳೆಯ ತೇಜೋವಧೆ ಹಾಗೂ ಜಾತಿ ನಿಂದನೆ ಪ್ರಕರಣಗಳನ್ನು ದಾಖಲಿಸಲಾಗಿದೆ.

ಛತ್ತೀಸ್‌ಘಡದ ರಾಯಪುರದಲ್ಲಿ ಕಳೆದ ತಿಂಗಳು ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಬರುವಂತೆ ಸಿಂಗ್ ನನ್ನ ಮಗಳಿಗೆ ತಿಳಿಸಿದ್ದರು. ಅಲ್ಲಿಗೆ ಹೋದಾಗ ದುರ್ವರ್ತನೆ ತೋರಿದ್ದಲ್ಲದೇ ಪ್ರಾಣ ಬೆದರಿಕೆ ಹಾಕಿದ್ದರು ಎಂದು ಹೇಳಿದ್ದಾರೆ.

ಅರ್ಚನಾ ಗೌತಮ್ ವಿರುದ್ಧ ಜಾತಿ ನಿಂದನೆ ಮಾಡಲಾಗಿದೆ. ಈ ಘಟನೆಯ ಕುರಿತ ವಿಡಿಯೋ ಒಂದು ರಾಯಪುರದಲ್ಲಿದ್ದ ವ್ಯಕ್ತಿಯಿಂದ ತಮಗೆ ದೊರೆತಿದೆ ಎಂದವರು ತಿಳಿಸಿದ್ದಾರೆ. ಅರ್ಚನಾ ಗೌತಮ್ ಅವರು ಬಿಗ್ ಬಾಸ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. 2022ರಲ್ಲಿ ಉತ್ತರ ಪ್ರದೇಶದ ಹಸ್ತಿನಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದರು.

# ಹೆಣ್ಣು ಮಕ್ಕಳಿಗೆ ಆಸ್ತಿ ನೀಡಲು ಮುಸ್ಲಿಂ ದಂಪತಿ ಮರು ವಿವಾಹ

ಕಾಸರಗೋಡು (ಕೇರಳ), ಮಾ. 8 – ತಮ್ಮ ಹೆಣ್ಣು ಮಕ್ಕಳ ಹಣಕಾಸು ಭದ್ರತೆಗೆಂದು ಕೇರಳದ ಕಾಸರಗೋಡಿನ ಮುಸ್ಲಿಂ ದಂಪತಿ ವಿಶೇಷ ವಿವಾಹ ಕಾಯ್ದೆಯಡಿ ಮರು ಮದುವೆಯಾದ ಘಟನೆ ನಡೆದಿದೆ. ವಕೀಲ ಹಾಗೂ ನಟ ಸಿ. ಶುಕ್ಕುರ್ ಹಾಗೂ ಅವರ ಪತ್ನಿ ಶೀನಾ ಅವರು ವಿಶೇಷ ವಿವಾಹ ಕಾಯ್ದೆಯಡಿ ಮದುವೆಯಾಗಿದ್ದಾರೆ. ಶೀನಾ ಅವರು ಮಹಾತ್ಮ ಗಾಂಧಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ. ಈ ಸಮಾರಂಭದಲ್ಲಿ ಅವರ ಮೂವರು ಪುತ್ರಿಯರು ಹಾಜರಿದ್ದರು.

ಮುಸ್ಲಿಂ ವೈಯಕ್ತಿಕ ಕಾಯ್ದೆಯ ಅನ್ವಯ ಗಂಡು ಮಗ ಇರದೇ ಹೋದಲ್ಲಿ ಹೆಣ್ಣು ಮಕ್ಕಳಿಗೆ ತಂದೆಯ ಆಸ್ತಿಯ ಮೂರನೇ ಎರಡರಷ್ಟು ಮಾತ್ರ ದೊರೆಯುತ್ತದೆ. ಉಳಿದದ್ದು ತಂದೆಯ ಸಹೋದರನಿಗೆ ಸೇರುತ್ತದೆ. ಈ ಹಿನ್ನೆಲೆಯಲ್ಲಿ ಹೆಣ್ಣು ಮಕ್ಕಳಿಗೆ ಪೂರ್ಣ ಆಸ್ತಿ ಸಿಗುವಂತಾಗಲು ವಿಶೇಷ ವಿವಾಹ ಕಾಯ್ದೆಯಡಿ ಮದುವೆಯಾಗಿರುವುದಾಗಿ ಶುಕ್ಕುರ್ ಹೇಳಿದ್ದಾರೆ. ಮರು ಮದುವೆಯನ್ನು ವಿರೋಧಿಸಿರುವ ಕೇರಳದ ಸುನ್ನಿ ಹೈಯರ್ ಎಜುಕೇಷನ್ ಇನ್‌ಸ್ಟಿಟ್ಯೂಟ್, ಇದು ಮುಸ್ಲಿಂ ವೈಯಕ್ತಿಕ ಕಾನೂನು ಹಾಗೂ ಇಸ್ಲಾಂಗೆ ಅಗೌರವ ತರುವ ಯತ್ನ ಎಂದು ಹೇಳಿದೆ.

ಇದು ನಾಟಕ ಹಾಗೂ ಶುಕ್ಕುರ್ ಸಹೋದರರು ಮೂರನೇ ಒಂದು ಭಾಗದ ಆಸ್ತಿ ಪಡೆಯದಂತೆ ಮಾಡುವ ಸಂಕುಚಿತ ಮನೋಭಾವ ಎಂದು ಸಂಸ್ಥೆ ಹೇಳಿದೆ.

ಈ ಆರೋಪ ತಳ್ಳಿ ಹಾಕಿರುವ ಶುಕ್ಕುರ್, ಯಾರಿಗೂ ಅಗೌರವ ತರುವ ಉದ್ದೇಶ ಇಲ್ಲ. ಆದರೆ, ತಮ್ಮ ಮೇಲೆ ಯಾವುದೇ ದೈಹಿಕ ದಾಳಿ ನಡೆದರೆ ಅದಕ್ಕೆ ಸುನ್ನಿ ಶಿಕ್ಷಣ ಸಂಸ್ಥೆಯೇ ಹೊಣೆ ಎಂದಿದ್ದಾರೆ.

ಶುಕ್ಕುರ್ ದಂಪತಿ 1994ರಲ್ಲಿ ಇಸ್ಲಾಮಿಕ್ ಪದ್ಧತಿ ಅನ್ವಯ ಮದುವೆಯಾಗಿದ್ದರು. ಬುಧವಾರದಂದು ಕಾಸರಗೋಡು ಜಿಲ್ಲೆಯ ಹೊಸದುರ್ಗ್ ತಾಲ್ಲೂಕಿನ ಕನ್ಹಂಗಡದಲ್ಲಿರುವ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ವಿಶೇಷ ವಿವಾಹ ಕಾಯ್ದೆಯಡಿ ಮದುವೆ ನೋಂದಾಯಿಸಿದ್ದಾರೆ.

## ಎಸ್‌ಎಸ್‌ಕೇರ್ ಟ್ರಸ್ಟ್ : ಇಂದು ಮೂತ್ರಪಿಂಡ ದಿನ

ವಿಶ್ವ ಮೂತ್ರಪಿಂಡ ದಿನಾಚರಣೆ ಅಂಗವಾಗಿ ಇಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 3 ರವರೆಗೆ ಬಾಪೂಜಿ ಆಸ್ಪತ್ರೆಯ ರೂಂ ನಂಬರ್ 17ರಲ್ಲಿ ಎಸ್ ಎಸ್ ಕೇರ್ ಟ್ರಸ್ಟ್ ವತಿಯಿಂದ ಉಚಿತ ಮೂತ್ರಪಿಂಡ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.

ಶಿಬಿರದಲ್ಲಿ ಸಮಾಲೋಚನೆ, ರಕ್ತದ ಸಕ್ಕರೆ ಪರೀಕ್ಷೆ, ರಕ್ತದ ಒತ್ತಡ ಪರೀಕ್ಷೆ, ಮೂತ್ರ ಪರೀಕ್ಷೆ, ಮೂತ್ರಪಿಂಡ (ಕಿಡ್ನಿ) ಪರೀಕ್ಷೆ ಉಚಿತವಾಗಿ ಮಾಡಲಾಗುವುದು.

## ಕ್ರಿಪ್ಟೋ ವಿನಿಮಯಕ್ಕೆ ಕೆ.ವೈ.ಸಿ. ಕಡ್ಡಾಯ

ನವದೆಹಲಿ, ಮಾ. 8 – ಕ್ರಿಪ್ಟೋ ವಿನಿಮಯ ಸಂಸ್ಥೆಗಳು ಹಾಗೂ ವರ್ಚ್ಯುಯಲ್ ಆಸ್ತಿಗಳನ್ನು ನಿರ್ವಹಿಸುವವರು ಇನ್ನು ಮುಂದೆ ತಮ್ಮ ಗ್ರಾಹಕರ ಕೆ.ವೈ.ಸಿ. ದಾಖಲೆ ಪಡೆಯುವುದು ಕಡ್ಡಾಯವಾಗಲಿದೆ.

ಈ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಮಾರ್ಚ್ 7ರಂದು ಆದೇಶವೊಂದನ್ನು ಹೊರಡಿಸಿದೆ. ಅಕ್ರಮ ಹಣ ತಡೆ ಕಾಯ್ದೆಯ ಅನ್ವಯ ಗ್ರಾಹಕರ ವಿವರಗಳನ್ನು ಸಲ್ಲಿಸಬೇಕೆಂದು ತಿಳಿಸಲಾಗಿದೆ.

## ಮ್ಯಾನ್‌ಮಾರ್‌ನ ಇಬ್ಬರಿಂದ ಬ್ರೌನ್ ಷುಗರ್ ವಶ

ಇಂಫಾಲ್, ಮಾ. 8 – ಮಣಿಪುರದ ತೆಂಗ್ನೌಪಲ್ ಜಿಲ್ಲೆಯಲ್ಲಿ ಕಳ್ಳಸಾಗಣೆ ಮಾಡುತ್ತಿದ್ದ ಇಬ್ಬರು ಮ್ಯಾನ್‌ಮಾರ್ ನಾಗರಿಕರಿಂದ 55.86 ಕೋಟಿ ರೂ.ಗಳ ಬ್ರೌನ್ ಷುಗರ್ ವಶಪಡಿಸಿಕೊಳ್ಳಲಾಗಿದೆ.

ಇವರು ಮ್ಯಾನ್‌ಮಾರ್‌ನ ಟಮು ನಗರದವರು. ಅಸ್ಸಾಂ ರೈಫಲ್ ಗಡಿಯಲ್ಲಿ ಸಾಮಾನ್ಯ ತಪಾಸಣೆ ನಡೆಸುವಾಗ ಇವರು ಸಿಕ್ಕಿ ಬಿದ್ದಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಮಣಿಪುರದ ಮುಖ್ಯಮಂತ್ರಿ ಎನ್. ಬೈರೆನ್ ಸಿಂಗ್, ಮ್ಯಾನ್‌ಮಾರ್‌ನ ಕೆಲವರು ಮಣಿಪುರದ ಸ್ಥಳೀಯ ಜನರ ವಿರುದ್ಧ ಮಾದಕ ಸಮರ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ.

## ಇಂದು ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಸಂಜೆ 6 ಕ್ಕೆ ಮಹಾತ್ಮ ಗಾಂಧೀಜಿಯವರ ವಿಚಾರಗಳ ಕುರಿತು ಚಿಂತನೆ ಹಾಗೂ ಸಂವಾದ ಕಾರ್ಯಕ್ರಮವು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರೊ.ಎಂ.ಬಸವರಾಜ್, ಕೆ.ಆರ್. ಸಿದ್ದಪ್ಪ, ಮಹಾಂತೇಶ್ ಅಗಡಿ, ಲಾಯರ್ ಸಿದ್ದಯ್ಯ, ಮಲ್ಲಾಬಾದಿ ಬಸವರಾಜ್, ಶಿವನಕೆರೆ ಬಸವಲಿಂಗಪ್ಪ ಮತ್ತಿತರರು ಭಾಗವಹಿಸುವವರು.




ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು

ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.

ಜನ್ಮ ದಿನದ ಶುಭಾಶಯಗಳು



ಇಂದು ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ 'ಜನತಾವಾಣಿ' ಸಂಪಾದಕರಾದ
ಶ್ರೀ ಎಂ.ಎಸ್. ವಿಕಾಸ್ ಅವರಿಗೆ
ಜನ್ಮ ದಿನದ ಹಾರ್ದಿಕ ಶುಭಾಶಯಗಳು...
ಭಗವಂತನು ಶ್ರೀಯುತರಿಗೆ ಆಯುರಾರೋಗ್ಯ-ಐಶ್ವರ್ಯವನ್ನಿತ್ತು ಕಾಪಾಡಲೆಂದು ಹಾರೈಸುವವರು...

ದಾವಣಗೆರೆ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ, ದಾವಣಗೆರೆ.
ದಾವಣಗೆರೆ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು
ಗೌರವಾಧ್ಯಕ್ಷರು : ಕಾಮತ್, ಅಧ್ಯಕ್ಷರು : ಹೆಚ್. ಚಂದ್ರು, ಉಪಾಧ್ಯಕ್ಷರು : ಟಿ. ಕುಮಾರಸ್ವಾಮಿ
ಪ್ರಧಾನ ಕಾರ್ಯದರ್ಶಿಗಳು : ರಮೇಶ್ ಜಿ. ವತನ್, ಖಜಾಂಚಿಗಳು : ಅರುಣ್ ಕುಮಾರ್
ಸಂಘಟನಾ ಕಾರ್ಯದರ್ಶಿಗಳು : ನಿಂಗಪ್ಪ ಡಿ.ಪಿ., ನಾಗರಾಜ್ ಟಿ.ಪಿ. ಮತ್ತು ಹಿರಿಯ ಪತ್ರಿಕಾ ವಿತರಕರು ಹಾಗೂ ಪತ್ರಿಕಾ ಮಿತ್ರರು.





Happy 50th Birthday

ಮಧ್ಯ ಕರ್ನಾಟಕದ ಪ್ರತಿಷ್ಠಿತ ಪತ್ರಿಕೆಯಾದ ಜನತಾ ವಾಣಿ ದಿನಪತ್ರಿಕೆಯ ಸಂಪಾದಕರಾದ
ಶ್ರೀ ಎಂಎಸ್.ವಿಕಾಸ್ ರವರ
ಐವತ್ತನೇ ಹುಟ್ಟು ಹಬ್ಬಕ್ಕೆ ಹಾರ್ದಿಕ ಶುಭಾಶಯಗಳು

ಶುಭ ಕೋರುವ

ಜಿಎಸ್.ಶ್ಯಾಮ್ ಬಿಟಿ.ಸಿದ್ದಪ್ಪ – ಬಿಜೆಪಿ ಯುವ ಮುಖಂಡರು
ಬಾಡದ ಆನಂದರಾಜ್ – ಜಿಲ್ಲಾಧ್ಯಕ್ಷರು ಶೋಷಿತ ವರ್ಗಗಳ ಮುಖಂಡರು
ಬಿಎಸ್.ರಮೇಶ್ – ಮಾಜಿ ಬಿಜೆಪಿ ಅಧ್ಯಕ್ಷರು ಮಾಯಾಕೊಂಡ
ಪಿ ಆರ್ ಹಳ್ಳಿ ಶಿವಕುಮಾರ್ – ಬಿಜೆಪಿ ಯುವ ಮುಖಂಡರು
ಪ್ಯಾಟೆ ಹನುಮಪ್ಪ – ಎಸ್ಸಿ ಬಿಜೆಪಿ ಮೋರ್ಚಾ ಅಧ್ಯಕ್ಷರು ಮಾಯಾಕೊಂಡ.
ಶ್ರೀನಿವಾಸ್ ಗುಮ್ಮನೂರು – ಬಿಜೆಪಿ ಯುವ ಮುಖಂಡರು
ಬಲರಾಮಪ್ಪ – ಬಿಜೆಪಿ ಹಿರಿಯಾ ಮುಖಂಡರು.ಮಾಯಾಕೊಂಡ
ಲೋಕಿಕೆರೆ ರಾಮಸ್ವಾಮಿ – ಬಿಜೆಪಿ ಎಸ್ಸಿ ಮೋರ್ಚಾ ಮಾಯಾಕೊಂಡ
ಆಶೋಕ ಸಿ. – ಬಿಜೆಪಿ ಮುಖಂಡರು ಮಾಯಾಕೊಂಡ

ನೂರುಕಾಲ ನಗುನಗುತಾ ನಮ್ಮೆಲ್ಲರ ಪ್ರೀತಿಯ ಪತ್ರಕರ್ತರಾಗಿ ಬಾಳಿ

iVoyant Systems Private Limited

**iVoyant Systems Private Limited** is a Bengaluru based wholly owned subsidiary of US based Services and Consulting IT company iVoyant LLC. At iVoyant, we build next generation Enterprise Products and Solutions with cutting-edge technologies. We aspire to be next generation Product development company coupled with deep domain expertise to solve industry specific problems. We are looking for a Full Stack Developer to work from our newly opened Center in Davangere. He will also lead a small team and act as a Centre Co-ordinator.

| Designation: | Location: |
|---|---|
| Senior Software Engineer | Software Technology Parks of India Center, Davangere. |

**Generic Requirements:**
- Bachelor's Degree in Engineering/MCA.
- 4 - 8 years professional experience in Software Development.
- Work experience in Product Design and Development projects/ programs.

**Job-specific essential Requirements:**
- Knowledge of Back-end languages and JavaScript frameworks
- Knowledge of any one backend technologylike C# or Java
- Knowledge of any one JavaScript framework like AngularJS or ReactJS or Node.js
- Must have a proven track record delivering Web applications gained through industry experience.
- Must have excellent knowledge of Micro-services and API design principles.
- Experience in continuous Integration and continuous Delivery using DevOps tools like Ant or Maven/Jenkins.
- Experience in designing, building, and deploying scalable, high-available (HA) and high-performance systems.
- Strong proficiency in: Distributed systems, Low-latency services, NoSQL and Relational databases.
- Solid understanding of any one Message Driven Applications –JMS, Kafka, Google Pub Sub, Active MQ, Rabbit MQ
- Knowledge of Containers and Container Management technologies like Docker and Kubernetes.
- Experience in any one of the Cloud platforms is desirable – AWS or Azure or GCP.

*Interested candidates may forward their resume to sheetalv@ivoyant.com before 31st Mar 23*

RASHTROTTHANA
COMPOSITE PU COLLEGE, DAVANAGERE
Ph : 08192-258255, Mob: 9480766501, 9964182067, Email: rpudvg@rvkcbse.in

Walk-In Interview
On 11-03-2023, Saturday. 4:00 pm to 6:00pm

Applications are invited for the post of Lecturers for the above institution for the Academic year 2023-24

| Designation | Subject | Qualification and Experience |
|---|---|---|
| Principal | Physics/ Chemistry/ Mathematics/Biology | Msc, B.Ed, M.Phil/Ph.D with min 15 yrs in Teaching & min 5 yrs in Administration given Astonishing Results for the College. |
| Correspondent | Office Management | Any Master Degree & Good Correspondence with Stakeholders |
| Senior Lecturers | Physics/Chemistry/ Mathematics/Botany/ Zoology | Msc, B.Ed, with min 10 yrs Achievement in Giving NEET+JEE+K-CET+Board Results |
| Lecturers | Computer / IT | Msc, B.Ed/ MCA with min 8 yrs Achievement in Board Results |
| Junior Lecturers | Physics/Chemistry/ Mathematics/Botany/ Zoology | Msc, B.Ed, with min 2 yrs Achievement in Giving NEET+JEE+K-CET+Board Results |
| Lab Instructor | Physics/Chemistry/ Botany/Zoology | Relevant Courses to the Post & min 2 yrs in PU College |
| Typist | — | Relevant Courses to the Post & min 2 yrs in PU College |
| Peon | — | PUC with min 2 yrs in PU College |

- Preference will be given to graduates & experienced lecturers who are creative in technology aided teaching.
- Remuneration is not constraint for deserving candidates with PF & ESI facility.

"EDUCATION IS NOT PREPARATION FOR LIFE; EDUCATION IS LIFE ITSELF"

ALL THE BEST FOR PU BOARD EXAMINATION

" ನೀವು ನಿಮ್ಮ ಗುರಿ ತಲುಪಬೇಕಾದರೆ ನೀವು ಒಂದೇ ಮನಸ್ಥಿತಿಯಿಂದ ನಿರಂತರವಾಗಿ ಪ್ರಯತ್ನಿಸಬೇಕು"



Best wishes
Smt. SHASHIKALA E.R
President

YOGI RAM
SHASHI EDUCATIONAL TRUST ®
LALITHA PRE UNIVERSITY COLLEGE
LALITHA INTERNATIONAL PUBLIC SCHOOL
CONTACT NO: | 9686551302 | 7022004042 | 7022004109 | 9980629965 |
Email: lalitha.puc2018@gmail.com| Website: www.lalithainternational.in

MAHA TVS
ಕೆಲಸಕ್ಕೆ ಬೇಕಾಗಿದ್ದಾರೆ
ಸರ್ವೀಸ್ ಮ್ಯಾನೇಜರ್ - 2
ಅಕೌಂಟೆಂಟ್ - 2 ವಾಟರ್ ವಾಷ್ - 2
ಮೆಕ್ಯಾನಿಕ್ - 2
***Qualification :***
B.Com., ITI, Diploma, SSLC, PUC
ಸಂಪರ್ಕಿಸಿ
ಮಹಾ ಟಿ.ವಿ.ಎಸ್.
ಸ್ಥಳ : 596, ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ವಾಣಿ ರೈಸ್ ಮಿಲ್ ಎದುರುಗಡೆ, ದಾವಣಗೆರೆ - 05
Mail : mahaautomobile55@gmail.com
M : 96116 86717, 96865 51303


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte